ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

## ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ





### ಪ್ರತಿಭಾವಂತ ಸಾಮಾಜಿಕ ಕಾರ್ಯಕರ್ತೆ

**ಶ್ರೀಮತಿ ಮಂಜುಳಾ ಪಾಟೀಲ**

ವಿದ್ಯಾರ್ಥಿ ಜೀವನದಿಂದಲೆ ಸಾಮಾಜಿಕ ಅಭಿವೃದ್ಧಿಯ ಕಳಕಳಿಯನ್ನು ಹೊಂದಿದ್ದ ಶ್ರೀಮತಿ ಮಂಜುಳಾ ಪಾಟೀಲರವರು ಹೈಸ್ಕೂಲನಲ್ಲಿ ವಿದ್ಯಾರ್ಥಿನಾಯಕಿಯಾಗಿ ಕಾರ್ಯ ದರ್ಶಿಯಾಗಿ ಕಾರ್ಯನಿರ್ವಹಿಸಿದವರು. ಮೂಲತಃ ಕೊಪ್ಪಳ ಜಿಲ್ಲೆಯವರು. ಕೃಷಿ ಕುಟುಂಬದಲ್ಲಿ ಜನನ. ತಂದೆ ಕೆ.ಸೂಗಪ್ಪ ಕೃಷಿಯ ಜೊತೆಗೆ ವಕೀಲಿ ವೃತ್ತಿಯವರು. ಎಸ್.ಎಸ್.ಎಲ್.ಸಿವರೆಗೆ ಶಿಕ್ಷಣ. ಶ್ರೀ ಅಮರೇಶಪಾಟೀಲರ ಜೊತೆ ವಿವಾಹದ ನಂತರ ಸಿಂಧನೂರಿನಲ್ಲಿ ವಾಸ. ಸಮಾಜದ ಅನಿಷ್ಟ ಪದ್ಧತಿಗಳ ನಿರ್ಮೂಲನೆಗೆ ಹೋರಾಟಕ್ಕಾಗಿ ಸಿಂಧನೂರಿನ ಅಕ್ಕನ ಬಳಗದ ಸಕ್ರೀಯ ಕಾರ್ಯಕರ್ತೆಯಾಗಿ ಗುರುತಿಸಿಕೊಂಡು ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡವರು.

ಇವರು ಸಾಹಿತ್ಯದಲ್ಲಿ ಆಸಕ್ತಿಯಿರುವವರು ಸಿಂಧನೂರಿನ ಸಾಹಿತ್ಯ ಪರಿಷತ್ತಿನ ಸಕ್ರೀಯ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸಿದ್ದಾರೆ. 'ಸಹಚರ' ಎಂಬ ಎನ್.ಜಿ.ಓ. ಸಂಸ್ಥೆಯ ಮುಖ್ಯ ಧರ್ಮದರ್ಶಿಗಳಾಗಿ ಕಾರ್ಯನಿರ್ವಹಿಸಿದ್ದಾರೆ. ಸಿಂಧನೂರಿನಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಹೋರಾಟ ಮಾಡಿದ್ದಾರೆ. ಸಮಾಜದ ಅಭಿವೃದ್ಧಿಗೆ ಶಿಕ್ಷಣವೆ ಮೂಲ ಎಂಬ ತತ್ವದ ಆಧಾರದ ಮೇಲೆ ಶಿಕ್ಷಣ ಕ್ಷೇತ್ರದಲ್ಲೂ ಕಾರ್ಯನಿರ್ವಹಿಸುವ ಆಸಕ್ತಿಯಿಂದ ಅಂಬಾದೇವಿ ವಿದ್ಯಾವರ್ಧಕ ಸಂಘದ ಸಕ್ರೀಯ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಹಕಾರ ಕ್ಷೇತ್ರದ ಮೂಲಕ ಜನ ಸಾಮಾನ್ಯರಿಗೆ ಹೆಚ್ಚಿನ ಸೇವೆ ಮಾಡಲು ಸಾಧ್ಯ ಎಂದು ತಿಳಿದು ಸಹಕಾರಿ ಕ್ಷೇತ್ರಕ್ಕೆ ಪ್ರವೇಶ. ಜನತಾ ಬಝಾರ ಸಿಂಧನೂರು ಇದರ ಅಧ್ಯಕ್ಷರಾಗಿ 8 ವರ್ಷಗಳ ಕಾಲ ಸೇವೆ ಸಲ್ಲಿಸಿ ಸಂಸ್ಥೆಯನ್ನು ಲಾಭದಾಯಕವಾಗಿ ಮುನ್ನಡೆಸಿದ್ದಾರೆ. ಜನತಾ ಸೌಹಾರ್ದ ಸಹಕಾರಿಯ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸುತ್ತಿರುವ ಇವರು ಪ್ರಸ್ತುತ ಕಿರಣ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿರುವ ಇವರು ಸಂಯುಕ್ತ ಸಹಕಾರಿಯ ನಿರ್ದೇಶಕಿ ಯಾಗಿ ರಾಯಚೂರು ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದಾರೆ.

ಸಹಕಾರ ಭಾರತಿ-ಕರ್ನಾಟಕದ ರಾಜ್ಯ ಕಾರ್ಯಕಾರಿಣಿಯಲ್ಲಿ ಸಕ್ರೀಯವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಪ್ರವೇಶವಿರದಿದ್ದರೆ ಜನಸಾಮಾನ್ಯರಿಗೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಅವಕಾಶಗಳಿವೆ. ಸಹಕಾರಿ ಕ್ಷೇತ್ರದಲ್ಲಿ ಮಹಿಳೆಯರಿಗೆ ಹಾಗೂ ಯುವಕರಿಗೆ ಹೆಚ್ಚಿನ ಅವಕಾಶಗಳು ದೊರಕುವಂತಾಗಬೇಕು ಎಂದು ಅಭಿಪ್ರಾಯವುಳ್ಳವರಾಗಿದ್ದಾರೆ.

## 58ನೇಯ ಅಖಿಲ ಭಾರತ ಸಹಕಾರ ಸಪ್ತಾಹ ಧ್ಯೇಯ: ಸಹಕಾರ ಸಂಘಗಳ ಮೂಲಕ ಸರ್ವಾಂಗೀಣ ಅಭಿವೃದ್ಧಿ

### Inclusive Development through Co-operatives



| | |
|---|---|
| 14-11-2011 | Co-operative Demovracy,Leadership and self reliance Day<br>ಸಹಕಾರ ಪ್ರಜಾಪ್ರಭುತ್ವ, ನಾಯಕತ್ವ ಮತ್ತು ಸ್ವಾವಲಂಬಿ ದಿನ |
| 15-11-2011 | Co-operative Marketing, Processing and consumer Day<br>ಸಹಕಾರ ಮಾರಾಟ, ಸಂಸ್ಕರಣೆ ಮತ್ತು ಗ್ರಾಹಕರ ದಿನ |
| 16-11-2011 | Shelter and living Environment through Cooperatives.<br>ಸಹಕಾರಿ ಸಂಘಗಳ ಮೂಲಕ ಆಶ್ರಯ ಮತ್ತು ಜೀವನ ಪರಿಸರ ದಿನ |
| 17-11-2011 | Cooperatives affordable Credit and other financial Services Day<br>ಸಹಕಾರಿ ಸುಲಭ ಸಾಲ ಮತ್ತು ಇತರೆ ಆರ್ಥಿಕ ಸೇವಾ ದಿನ |
| 18-11-2011 | Empowerment of Womrn,Youth and Weaker section through Cooperative Day<br>ಸಹಕಾರಿ ಸಂಘಗಳ ಮೂಲಕ ಮಹಿಳಾ ಸಬಲೀಕರಣ,ಯುವಜನ ಹಾಗೂ ದುರ್ಬಲರ ಸಹಕಾರ ದಿನ |
| 19-11-2011 | Cooperatives values,principles and GoodGovernnance Day<br>ಸಹಕಾರಿ ಮೌಲ್ಯಗಳು, ತತ್ವಗಳು ಮತ್ತು ಉತ್ತಮ ಆಡಳಿತ ದಿನ |
| 20-11-2011 | Cooperatives Human Resource Development and Cooperation among Cooperatives Day<br>ಸಹಕಾರ ಸಂಘಗಳ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಹಕಾರ ಸಂಘಗಳ ನಡುವೆ ಸಹಕಾರ ದಿನ |

### ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ - 1. ದೂ. 0831-2401551

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
(ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು - 560010.

**ದೂರವಾಣಿ ಸಂಖ್ಯೆಗಳು :**
23378375/76/77/78/79/80 ಹಾಗೂ 23474408, 23573291

ಸಂಪಾದಕ, ಪ್ರಕಾಶಕ: **ಶರಣಗೌಡ ಜಿ. ಪಾಟೀಲ,**
ಸಂಚಿಕೆ ಸಿದ್ಧತೆ **ವಿ.ಜಿ.ಕಾರಕೂನ**
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

ಸ್ವಾಭಿಮಾನಿ

# ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ದಶಮಾನೋತ್ಸವ ವರ್ಷ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 8 * ಸಂಚಿಕೆ 9 * ಸೆಪ್ಟೆಂಬರ್ 2011 * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ ₹ 50/– * ಬೆಲೆ ₹ 5






ಉನ್ನತ ಶಿಕ್ಷಣ ಸಚಿವರಾದ ಶ್ರೀ ವಿ.ಎಸ್. ಆಚಾರ್ಯರವರಿಂದ ಕುಮಾರಿ ಸಾವಿತ್ರಿಯವರಿಗೆ ಎಂಬಿಎ ಪದವಿ ಪ್ರದಾನ.



"ನೇರ ತೆರಿಗೆ ಪದ್ಧತಿ" ಕುರಿತಾದ ಕಾರ್ಯಕ್ರಮವನ್ನು ಸಹಕಾರಿ ಮಹಾ ಮಂಡಳದ ಅಧ್ಯಕ್ಷರೂ, ಮಾಜಿ ಸಹಕಾರ ಸಚಿವ ಶ್ರೀ ಜಿ.ಟಿ.ದೇವೇಗೌಡರವರು ಉದ್ಘಾಟಿಸಿದರು.

## ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ ........ 2
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 3,4,5
ಎಂ.ಬಿ.ಎ. ಪದವಿ ಪ್ರದಾನ ........ 6,7
10ನೇ ಸಾಮಾನ್ಯ ಸಭೆ ........ 8,9
ಸ್ವದೇಶಿ ಜಾಗರಣ ಮಂಚ ........ 10
ಲೇಖನ ........ 11,12,13,14
ಸಂಯುಕ್ತ ಸಹಕಾರಿಗೆ ಅರ್ಜಿ ಆಹ್ವಾನ ........ 15
ನಿರ್ದೇಶಕರ ಪರಿಚಯ ........ 16

ರಂಜಾನ್ ಹಾಗೂ ಗೌರಿ – ಗಣೇಶ ಹಬ್ಬದ ಶುಭಾಶಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 1776 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 393



"ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ಅತ್ಯಂತ ಉತ್ಸಾಹದಿಂದ ಈ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವುದು ನಿಮಗೆಲ್ಲ ಹೆಮ್ಮೆಯ ಹಾಗೂ ಪ್ರತಿಷ್ಠೆಯ ವಿಷಯವಾಗಬೇಕು. ಹೀಗಾಗಿ ಸಭೆಯ ಹಾಜರಾತಿ ಸಂತೋಷ ಪಡುವಂತಹದ್ದಾಗಿರಬೇಕು ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಮುಂಬರುವ ದಿನಗಳಲ್ಲಿ ತಾವು ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ."

# ಸಂಯುಕ್ತ ಸಹಕಾರಿಯ 10ನೇ ಸಾಮಾನ್ಯ ಸಭೆ

ಸೌಹಾರ್ದ ಸಹಕಾರಿ ಬಂಧುಗಳಿಗೆ ಗೌರಿ ಗಣೇಶ ಹಬ್ಬದ ಶುಭಾಶಯಗಳು. ಸರ್ವ ಮಂಗಲ ಕಾರ್ಯಗಳಲ್ಲಿ ಪ್ರಥಮ ಪೂಜಿತನಾಗಿರುವ ವಿಘ್ನೇಶ್ವರ, ಎಲ್ಲ ವಿಘ್ನಗಳನ್ನು ದೂರಮಾಡಿ ಎಲ್ಲರ ಬಾಳಿನಲ್ಲಿ ಸುಖ ಶಾಂತಿ ಹಾಗೂ ನೆಮ್ಮದಿಯನ್ನು ಕರುಣಿಸಲಿ ಎಂದು ಹಾರೈಸುತ್ತೇನೆ. ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ, ಹೊಸ ಶಕ್ತಿಯನ್ನು, ಉತ್ಸಾಹವನ್ನು ತುಂಬಿ ಸೌಹಾರ್ದ ಸಹಕಾರಿ ಕ್ಷೇತ್ರ ಅಭಿವೃದ್ಧಿ ಹೊಂದಲು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇನೆ.

ಸಂಯುಕ್ತ ಸಹಕಾರಿಯ 10ನೇಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 24 ಆಗಸ್ಟ್ 2011 ರಂದು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ ಯಶಸ್ವಿಯಾಗಿ ನಡೆಯಿತು. ರಾಜ್ಯದ ವಿವಿಧ ಭಾಗಗಳಿಂದ 353 ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿ, ಸೌಹಾರ್ದ ಸಹಕಾರಿಯ ಪ್ರಗತಿಗೆ ತಮ್ಮ ಅತ್ಯಮೂಲ್ಯ ಸಲಹೆಗಳನ್ನು ನೀಡಿದರು. ಇದರ ಜೊತೆಗೆ 200ಕ್ಕೂ ಹೆಚ್ಚು ಸಹಕಾರಿಗಳು, ನಿರ್ದೇಶಕರು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಸಾಮಾನ್ಯ ಸಭೆಯ ಕಾರ್ಯಕಲಾಪಗಳನ್ನು ವೀಕ್ಷಿಸಿರುವುದು ಸಂತೋಷದ ವಿಷಯ ಹಾಗೂ ಸ್ವಾಗತಾರ್ಹ.

10ನೇ ಸಾಮಾನ್ಯ ಸಭೆ, ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಗೆ ಸೌಹಾರ್ದ ಸಹಕಾರಿಗಳ ಬದ್ಧತೆಯನ್ನು ದೃಢಸಂಕಲ್ಪವನ್ನು ಮತ್ತೊಮ್ಮೆ ಪುನರುಚ್ಚರಿಸುವ ಹಾಗೂ ಸಾರ್ವಜನಿಕರಿಗೆ ಮತ್ತು ಸರಕಾರಕ್ಕೆ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಹಾಗೂ ಸಾಧನೆಯನ್ನು ಪರಿಚಯಿಸುವ ಸಭೆಯಾಗಿತ್ತು. ಭಾಗವಹಿಸುವಿಕೆ ಚೆನ್ನಾಗಿದ್ದು, ವಿಷಯಗಳ ಬಗ್ಗೆ ಪರಿಣಾಮಕಾರಿಯಾಗಿ ಚರ್ಚೆ ನಡೆದಿದೆ. ವಿಷಯಗಳ ಬಗ್ಗೆ ಕೇಂದ್ರೀಕೃತ ಚರ್ಚೆಗೆ ಇನ್ನಷ್ಟು ಗಮನ ಹರಿಸಿದ್ದರೆ ಚೆನ್ನಾಗಿತ್ತು. ಕೆಲವು ಕಡೆಗಳಲ್ಲಿ ವಿಷಯಾಂತರದ ಪ್ರಯತ್ನಗಳು ಸಲ್ಲದು. ಸಾಮಾನ್ಯ ಸಭೆ ನೀತಿ ನಿಯಮಗಳನ್ನು ಮುಂಚಿತವಾಗಿ ತಿಳಿಸಿರುವುದನ್ನು ಚೆನ್ನಾಗಿ ಓದಿಕೊಂಡು ಬಂದಿದ್ದರೆ ಇನ್ನೂ ಹೆಚ್ಚು ಉತ್ತಮವಾಗುತ್ತಿತ್ತು. ಇರಲಿ. ಮುಂದಿನ ದಿನಗಳಲ್ಲಿ ಹೆಚ್ಚಿನ ಪರಿಪಕ್ವತೆ ಸಾಧಿಸಲು ಪ್ರಯತ್ನ ಅಗತ್ಯ.

ಗುಣಾತ್ಮಕ ಪರಿಣಾಮಕಾರಿ ಚರ್ಚೆಯಾಗಿದೆ. ಉತ್ತಮ ಸಲಹೆ ಸೂಚನೆಗಳು ಬಂದಿವೆ. ಇವೆಲ್ಲವುಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕ ಹಾಗೂ ವಿಶೇಷವಾಗಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಯ ಗುಣ ಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿ. ಭಾಗವಹಿಸಿದ ಎಲ್ಲ ಪ್ರತಿನಿಧಿಗಳಿಗೆ ಸಂಯುಕ್ತ ಸಹಕಾರಿಯ ಪರವಾಗಿ ತುಂಬು ಹೃದಯದ ಧನ್ಯವಾದಗಳು.

ಆದರೆ ನಿಮಗೆಲ್ಲ ತಿಳಿದಿರುವಂತೆ ರಾಜ್ಯದ ಸೌಹಾರ್ದ ಸಹಕಾರಿಗಳ ಸಂಖ್ಯೆ ಇನ್ನೇನು ಕೆಲವೆ ದಿನಗಳಲ್ಲಿ 1800ನ್ನು ತಲುಪಲಿದೆ. ಮಹಾಸಭೆಯಲ್ಲಿ ಭಾಗವಹಿಸಲು 1156 ಸೌಹಾರ್ದ ಸಹಕಾರಿಗಳಿಗೆ ಅರ್ಹತೆಯಿದ್ದು ಭಾಗವಹಿಸಿದ ಸಹಕಾರಿಗಳ ಸಂಖ್ಯೆ 353 ಅಂದರೆ ಶೇಕಡಾ 30% ಗಮನಿಸಿದರೆ ತೀರ ಕಡಿಮೆಯೆನಿಸುತ್ತದೆ. ಸೌಹಾರ್ದ ಸಹಕಾರಿಗಳ ಭಾಗವಹಿಸುವಿಕೆಯೆ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯ ಬೆನ್ನೆಲುಬು ಹಾಗೂ ಪೂರಕವೆಂಬುದನ್ನು ತಾವು ಗಮನಿಸಬೇಕು. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆಯಾಗಿ ಅತ್ಯಂತ ಉತ್ಸಾಹದಿಂದ ಈ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವುದು ನಿಮಗೆಲ್ಲ ಹೆಮ್ಮೆಯ ಹಾಗೂ ಪ್ರತಿಷ್ಠೆಯ ವಿಷಯವಾಗಬೇಕು. ಹೀಗಾಗಿ ಸಭೆಯ ಹಾಜರಾತಿ ಸಂತೋಷ ಪಡುವಂತಹದ್ದಾಗಿರಬೇಕು ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಮುಂಬರುವ ದಿನಗಳಲ್ಲಿ ತಾವು ಈ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ.

ಸೌಹಾರ್ದ ಸಹಕಾರಿಗಳ ಸಂಖ್ಯೆ ಹೆಚ್ಚಾದಂತೆ ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತಿರುವ ಸಹಕಾರಿಗಳು ಸೌಹಾರ್ದ ಸಹಕಾರಿ ಕಾಯ್ದೆಯನ್ನು ಸಂಯುಕ್ತ ಸಹಕಾರಿಯ ಮಾರ್ಗಸೂಚಿಗಳನ್ನು ಗಮನಿಸದೆ ತಿಳಿದೂ ತಿಳಿಯದೆಯೂ ಕೆಲವು ತಪ್ಪುಗಳನ್ನು ಮಾಡಿದಾಗ ಅಂಥವರ ಮೇಲೆ ಅನಿವಾರ್ಯವಾಗಿ ಕಾನೂನುಬದ್ಧ ಕ್ರಮಜರುಗಿಸುವುದು ಅನಿವಾರ್ಯ. ಇಂಥವುಗಳಿಗೆ ಅವಕಾಶ ನೀಡದೆ ಸಂಯುಕ್ತ ಸಹಕಾರಿಯ ಮಾರ್ಗಸೂಚಿಗಳನ್ನು, ಸೌಹಾರ್ದ ಸಹಕಾರಿ ಕಾಯ್ದೆಯನ್ನು ಹಾಗೂ ಪೂರಕ ವಿಷಯಗಳನ್ನು ಅಧ್ಯಯನ ಮಾಡಿ ಕಾರ್ಯನಿರ್ವಹಿಸುವುದು ಅವಶ್ಯಕವೆಂದು ತಮ್ಮೆಲ್ಲರ ಗಮನಕ್ಕೆ ತರಬಯಸುತ್ತೇನೆ.

ಸೌಹಾರ್ದ ಸಹಕಾರಿ ಕ್ಷೇತ್ರ ಸಹಕಾರಿ ಕ್ಷೇತ್ರದಲ್ಲಿ ಒಂದು ಮಾದರಿ ವ್ಯವಸ್ಥೆಯಾಗಿ ಹೊರಹೊಮ್ಮಿದೆ. ಇಡೀ ಸಹಕಾರಿ ಕ್ಷೇತ್ರಕ್ಕೆ ಬಲ ತಂದುಕೊಟ್ಟಿದೆ ಎಂದು ಹಿರಿಯ ಸಹಕಾರಿಗಳು ಅಭಿಪ್ರಾಯ ಪಟ್ಟಿದ್ದಾರೆ. ಈ ಕ್ಷೇತ್ರದ ಸಾಧನೆ ಹಾಗೂ ಕಾರ್ಯವಿಧಾನದ ಬಗ್ಗೆ ತಮ್ಮ ತೃಪ್ತಿಯನ್ನು ವ್ಯಕ್ತಪಡಿಸುತ್ತಿರುವ ಈ ಸನ್ನಿವೇಶವನ್ನು ಅವರುಗಳು ನಮಗೆ ನೀಡುತ್ತಿರುವ ಪ್ರೋತ್ಸಾಹವೆಂದು ಭಾವಿಸಿ ಮುನ್ನಡೆಯುವ ಸಂಕಲ್ಪವನ್ನು ಮಾಡೋಣ. ನಾವುಗಳೆಲ್ಲ ಒಂದಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಡಿಪಾಯವನ್ನು ಬಲಪಡಿಸೋಣ.ಆರ್ಥಿಕ ಅಭಿವೃದ್ಧಿ ಸಾಧಿಸುತ್ತ ಮುನ್ನಡೆಯೋಣ. ಮತ್ತೊಮ್ಮೆ ಎಲ್ಲರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು.

– ಎಸ್.ಆರ್. ಸತೀಶಚಂದ್ರ

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

**(ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರಡಿಯ ಶಾಸನಬದ್ಧ ಉಸ್ತುವಾರಿ ಸಂಸ್ಥೆ)**

**ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**

ದಿನಾಂಕ:23.08.2011ರ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯಲ್ಲಿ ಮತ್ತು ದಿನಾಂಕ:24.08.2011ರ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿದಂತೆ ಸಂಯುಕ್ತ ಸಹಕಾರಿಗೆ ಅವಶ್ಯಕವಾಗಿರುವ ಈ ಕೆಳಗಿನ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಕುರಿತು ಜಾಹಿರಾತನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ದಿನಾಂಕ 07.09.2011 ರಂದು ಪ್ರಕಟಿಸಲಾಗಿದೆ. ಪ್ರಜಾವಾಣಿ ಪತ್ರಿಕೆಯ (ಉದ್ಯೋಗವಾಣಿ) ಪುಟ ಸಂಖ್ಯೆ 11 ರಲ್ಲಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಅವೆನ್ಯೂ ಪುರವಣಿಯ ಪುಟ ಸಂಖ್ಯೆ 3 ರಲ್ಲಿ ಜಾಹಿರಾತು ಇರುತ್ತದೆ. ಸದಸ್ಯ ಸಹಕಾರಿಗಳ ಮಾಹಿತಿಗಾಗಿ ಸ್ವಾಭಿಮಾನಿ ಸಹಕಾರಿಯಲ್ಲಿ ಪ್ರಕಟಿಸಲಾಗುತ್ತಿದೆ.

**ಅರ್ಜಿ ಸಲ್ಲಿಸುವ ವಿಧಾನ:**

1. www.souharda.coop ಅಂತರ್ಜಾಲದ ಮುಖಾಂತರ ಉಪ ಸಿಬ್ಬಂದಿ ಹುದ್ದೆಯನ್ನು ಹೊರತುಪಡಿಸಿ ಉಳಿದ ಎಲ್ಲಾ ಹುದ್ದೆಗಳಿಗೂ ಆನ್‌ಲೈನ್ ಮುಖಾಂತರವೇ ಅರ್ಜಿಯನ್ನು ಸಲ್ಲಿಸತಕ್ಕದ್ದು, ಆನ್‌ಲೈನ್ ಹೊರತುಪಡಿಸಿ ಬೇರೆ ಯಾವುದೇ ವಿಧಾನದ ಮೂಲಕ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
2. ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವವರು ಕ್ರಮಬದ್ಧವಾದ ಇ–ಮೈಲ್ ಐ.ಡಿ ಮತ್ತು ಮೊಬೈಲ್ ಸಂಖ್ಯೆಯನ್ನು ಹೊಂದಿರತಕ್ಕದ್ದು. ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಿದ ನಂತರ ಮುಂದಿನ ಎಲ್ಲಾ ಸೂಚನೆಗಳನ್ನು ಮೈಲ್ ಮತ್ತು ಎಸ್‌ಎಂಎಸ್‌ಗಳ ಮೂಲಕ ತಿಳಿಸಲಾಗುವುದು.
3. ಎಲ್ಲಾ ಹುದ್ದೆಗಳಿಗೂ ಕನ್ನಡದಲ್ಲಿ ಓದಲು, ಬರೆಯಲು,ಮಾತನಾಡಲು ತಿಳಿದಿರುವುದು ಕಡ್ಡಾಯ.
4. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ನಂತರ ಅರ್ಜಿಯ ಪ್ರತಿಯನ್ನು ಮುದ್ರಿಸಿಕೊಳ್ಳಿ, ಸದರಿ ಮುದ್ರಿತ ಅರ್ಜಿಯ ಜೊತೆಗೆ ಸಹಾಯಕ ಪ್ರಧಾನ ವ್ಯವಸ್ಥಾಪಕ ಹುದ್ದೆಗೆ '300,ಎಲ್ಲಾ ವಿಭಾಗದ ಅಧಿಕಾರಿ ಮತ್ತು ಕಿರಿಯ ಅಧಿಕಾರಿಗಳ ಹುದ್ದೆಗೆ '200 ಹಾಗೂ ಸಹಾಯಕರು ಹಾಗೂ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗೆ '100ಗಳಡಿಡಿಯನ್ನು 'ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,' ಈ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ದಿನಾಂಕ:23.09.2011ರ ಸಂಜೆ 5:00ರ ಒಳಗಾಗಿ ಸಂಯುಕ್ತ ಸಹಕಾರಿಯನ್ನು ತಲುಪುವಂತೆ ಕಳುಹಿಸಿ. ಡಿಡಿಯ ಹಿಂಭಾಗದಲ್ಲಿ ತಮಗೆ ನೀಡಲಾದ ಪ್ರತ್ಯೇಕ ಅರ್ಜಿ ಸಂಖ್ಯೆ, ಹೆಸರು, ಅರ್ಜಿ ಸಲ್ಲಿಸಿರುವ ಹುದ್ದೆ, ಮೊಬೈಲ್ ಸಂಖ್ಯೆಯನ್ನು ನಮೂದಿಸಿ. ಆಯಾ ಹುದ್ದೆಗೆ ನಿಗದಿಪಡಿಸಿದ ಮೊತ್ತದ ಡಿಡಿಯನ್ನು ಲಗತ್ತಿಸಿಲ್ಲದ ಅರ್ಜಿಯನ್ನು ಅಥವಾ ನಿಗದಿತ ಸಮಯದ ನಂತರ ತಲುಪಿದ ಅರ್ಜಿಯನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ. ಶುಲ್ಕವನ್ನು ಚೆಕ್, ನಗದು ಅಥವಾ ಇನ್ನಾವುದೇ ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ.
5. ಅರ್ಜಿಯ ಜೊತೆ ಸ್ವಯಂ ದೃಢೀಕೃತ ಪಾಸ್‌ಪೋರ್ಟ್ ಅಳತೆಯ ಫೋಟೋ ಅಂಟಿಸುವುದು ಕಡ್ಡಾಯ.
6. ಆನ್‌ಲೈನ್ ಅರ್ಜಿ ಸಲ್ಲಿಸುವುದಕ್ಕೂ ಪೂರ್ವದಲ್ಲಿ ಒಂದು ಎಂ.ಬಿ ಅಳತೆ ಮೀರಿಲ್ಲದ ಪಾಸ್‌ಪೋರ್ಟ್ ಅಳತೆಯ ಸಾಫ್ಟ್ ಕಾಪಿ ಭಾವಚಿತ್ರವನ್ನು ಸಿದ್ಧವಾಗಿಟ್ಟುಕೊಳ್ಳಿ. ಸದರಿ ಭಾವ ಚಿತ್ರವನ್ನು ಸೂಚಿಸಲ್ಪಟ್ಟ ಸ್ಥಳದಲ್ಲಿ ಅಪ್‌ಲೋಡ್ ಮಾಡಿ.
7. ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸುವವರು ಸದರಿ ಹುದ್ದೆಯ ಶುಲ್ಕದ ಡಿಡಿಯೊಂದಿಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಬೇಕು. ಪ್ರತಿ ಅರ್ಜಿಯ ಪ್ರತ್ಯೇಕವಾದ ಲಕೋಟೆಯನ್ನು (ಕವರ್)ನ್ನು ಸಂಯುಕ್ತ ಸಹಕಾರಿಗೆ ಕಳುಹಿಸತಕ್ಕದ್ದು. ಪ್ರತಿ ಲಕೋಟೆ ಮೇಲೂ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತಿದೆಯೆಂಬುದನ್ನು ಸ್ಪಷ್ಟವಾಗಿ ದಪ್ಪ ಅಕ್ಷರದಲ್ಲಿ ಬರದಿರಬೇಕು.

| ಕ್ರಸಂ | ಹುದ್ದೆಗಳ ಹೆಸರು | ಹುದ್ದೆಗಳ ಸಂಖ್ಯೆ | ಅರ್ಹತೆ | ವಯೋಮಿತಿ |
|---|---|---|---|---|
| 01. | ಸಹಾಯಕ ಪ್ರಧಾನ ವ್ಯವಸ್ಥಾಪಕರು | 02 | ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿಯೊಂದಿಗೆ ಕಾನೂನು ಹಾಗೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನಿಷ್ಠ 2 ವರ್ಷಗಳ ಅನುಭವ ಅಗತ್ಯ. | ಗರಿಷ್ಠ 35 |
| 02. | ಅಧಿಕಾರಿಗಳು<br>ಕ್ರಸಂ / ಹುದ್ದೆಗಳ ಸಂಖ್ಯೆ / ವಿಭಾಗ<br>1 / 2 / ಕಾನೂನು ವಿಭಾಗ<br>2 / 2 / ಲೆಕ್ಕ ವಿಭಾಗ<br>3 / 1 / ಆಡಳಿತ ವಿಭಾಗ | 05 | 1 ಕಾನೂನು ವಿಭಾಗದ ಅಧಿಕಾರಿ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯೊಂದಿಗೆ ಕನಿಷ್ಠ 1 ವರ್ಷದ ಅನುಭವ ಅಗತ್ಯ.<br>2 ಲೆಕ್ಕ ವಿಭಾಗದ ಅಧಿಕಾರಿ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದಿಂದ ವಾಣಿಜ್ಯ ವಿಷಯದಲ್ಲಿ ಪದವಿಯೊಂದಿಗೆ ಕನಿಷ್ಠ 1 ವರ್ಷದ ಅನುಭವ ಅಗತ್ಯ.<br>3 ಆಡಳಿತ ವಿಭಾಗದ ಅಧಿಕಾರಿ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದಿಂದ ಯಾವುದೇ ಪದವಿಯೊಂದಿಗೆ ಸಹಕಾರ ಹಾಗೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನಿಷ್ಠ 1 ವರ್ಷದ ಅನುಭವ ಅಗತ್ಯ | ಗರಿಷ್ಠ 35 |
| 03. | ಕಿರಿಯ ಅಧಿಕಾರಿಗಳು<br>ಕ್ರಸಂ / ಹುದ್ದೆಗಳ ಸಂಖ್ಯೆ / ವಿಭಾಗ<br>1 / 3 / ಕಾನೂನು ವಿಭಾಗ<br>2 / 3 / ತರಬೇತಿ ವಿಭಾಗ<br>3 / 2 / ಆಡಳಿತ ವಿಭಾಗ | 08 | 1. ಕಾನೂನು ವಿಭಾಗದ ಕಿರಿಯ ಅಧಿಕಾರಿ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯದ ಕಾನೂನು ಪದವಿ ಹೊಂದಿರಬೇಕು.<br>2. ತರಬೇತಿ ವಿಭಾಗದ ಕಿರಿಯ ಅಧಿಕಾರಿ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯ ದಿಂದ ಪದವಿ ಹೊಂದಿರಬೇಕು. ತರಬೇತಿ ಮತ್ತು ಪ್ರಚಾರದಲ್ಲಿ ಅನುಭವ ಹೊಂದಿರುವವರಿಗೆ ಆದ್ಯತೆ.<br>3. ಆಡಳಿತ ವಿಭಾಗದ ಕಿರಿಯ ಅಧಿಕಾರಿ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾಲಯ ದಿಂದ ಪದವಿಯೊಂದಿಗೆ ಸಹಕಾರ ಕ್ಷೇತ್ರದಲ್ಲಿ ಅನುಭವ ಹೊಂದಿದವರಿಗೆ ಆದ್ಯತೆ. | ಗರಿಷ್ಠ 30 |
| 04 | ಸಹಾಯಕರು | 05 | ಪಿಯುಸಿ ಅಥವಾ ತತ್ಸಮಾನ | ಗರಿಷ್ಠ 30 |
| 05 | ಡಾಟಾ ಎಂಟ್ರಿ ಆಪರೇಟರ್ | 01 | ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯೊಂದಿಗೆ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಕೋರ್ಸ್ ಆಗಿರಬೇಕು ಹಾಗೂ ಡಿಟಿಪಿ ಅನುಭವ ಹೊಂದಿರುವವರಿಗೆ ಆದ್ಯತೆ. | ಗರಿಷ್ಠ 30 |
| 06 | ಉಪ ಸಿಬ್ಬಂದಿ | 03 | ಎಸ್‌ಎಸ್‌ಎಲ್‌ಸಿ/ತತ್ಸಮಾನ ವಿದ್ಯಾರ್ಹತೆ. ಲಘು ವಾಹನ ಚಾಲನಾ ಪರವಾನಗಿ ಹೊಂದಿರುವವರಿಗೆ ಆದ್ಯತೆ | ಗರಿಷ್ಠ 25 |

**ಸೂಚನೆಗಳು:**

1. ಅರ್ಜಿಯನ್ನು ಸಲ್ಲಿಸಿದ ನಂತರ ಪ್ರತಿ ಅರ್ಜಿಗೂ ಸಹ ಪ್ರತ್ಯೇಕ ಸಂಖ್ಯೆಯನ್ನು ನೀಡಲಾಗುತ್ತದೆ. ಸದರಿ ಪ್ರತ್ಯೇಕ ಸಂಖ್ಯೆಯನ್ನು ಬರೆದಿಟ್ಟುಕೊಳ್ಳಿ. ದಿನಾಂಕ:18.09.2011ರ ಒಳಗಾಗಿ ಸದರಿ ಪ್ರತ್ಯೇಕ ಸಂಖ್ಯೆಯನ್ನು ಉಪಯೋಗಿಸಿಕೊಂಡು ಅರ್ಜಿಯನ್ನು ಮುದ್ರಿಸಿಕೊಳ್ಳಬಹುದಾಗಿರುತ್ತದೆ.
2. ಸಂಯುಕ್ತ ಸಹಕಾರಿಯ ಸೇವೆಗೆ ಆಯ್ಕೆಯಾದ ಅಭ್ಯರ್ಥಿಯು ಎರಡು ವರ್ಷಗಳ ಪರಿಕ್ಷಾರ್ಥ ಸೇವಾ ಅವಧಿಯನ್ನು ಹೊಂದಿರುತ್ತಾರೆ. ತೃಪ್ತಿದಾಯಕ ಸೇವಾ ಅವಧಿಯನ್ನು ಪೂರ್ಣಗೊಳಿಸಿದ ಅಭ್ಯರ್ಥಿಯ ಸೇವೆಯನ್ನು ಖಾಯಮಾತಿ ಗೊಳಿಸಲಾಗುತ್ತದೆ. ಸೇವಾ ಖಾಯಮಾತಿಯ ನಂತರ ಆಯಾ ಹುದ್ದೆಗಳಿಗನುಗುಣವಾಗಿ ಈ ಕೆಳಗಿನಂತೆ ವೇತನ ಶ್ರೇಣಿಯನ್ನು ನೀಡಲಾಗುತ್ತದೆ. ಸೇವಾ ಖಾಯಮಾತಿಯ ಪೂರ್ವದಲ್ಲಿ ಆಯಾ ಹುದ್ದೆಗಳಿಗೆ ಬೇರೆ ಬೇರೆಯಾದ ಕ್ರೋಢೀಕೃತ ವೇತನವನ್ನು ನಿಗದಿಪಡಿಸಲಾಗುತ್ತದೆ.

ಅ. ಸಹಾಯಕ ಪ್ರಧಾನ ವ್ಯವಸ್ಥಾಪಕ:11000–600–14000–750–17750–900–22250

ಆ. ಅಧಿಕಾರಿ:9000–450–11250–600–14250–750–18000

ಇ. ಕಿರಿಯ ಅಧಿಕಾರಿ:8000–350–9750–500–12250–650–15500

ಈ. ಸಹಾಯಕ ಮತ್ತು ಡಾಟಾ ಎಂಟ್ರಿ ಆಪರೇರ್:6500–300–8000–450–10250–600–13250

ಉ. ಉಪ ಸಿಬ್ಬಂದಿ:5000–200–6000–300–7500–500–10000.

ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ಮತ್ತು ನಗರ ಪರಿಹಾರ ಭತ್ಯೆಗಳು ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ನಿಗದಿಪಡಿಸಿದ ದರದಲ್ಲಿ ಇರತ್ತವೆ.

3. ವಿದ್ಯಾರ್ಹತೆ ಹಾಗೂ ಅನುಭವದ ಅಸಲಿ ದಾಖಲಾತಿಗಳನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸುವುದು ಕಡ್ಡಾಯ.
4. ಎಲ್ಲಾ ಹುದ್ದೆಗಳಿಗೂ ಕಂಪ್ಯೂಟರ್ ಜ್ಞಾನ ಅವಶ್ಯಕ.
5. ನಿಗದಿಪಡಿಸಿರುವ ಹುದ್ದೆಗಳ ಸಂಖ್ಯೆಯನ್ನು ಮುನ್ಸೂಚನಾ ರಹಿತವಾಗಿ ಮರುನಿಗದಿಗೊಳಿಸಬಹುದಾಗಿರುತ್ತದೆ.
6. ಅರ್ಹ ಅಭ್ಯರ್ಥಿಗಳ ಆಯ್ಕೆಯನ್ನು ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ಆಧಾರದ ಮೇಲೆ ಮಾಡಲಾಗುವುದು. ಆದಾಗ್ಯೂ ಸಂಯುಕ್ತ ಸಹಕಾರಿಯು ಈ ವಿಧಾನದಲ್ಲಿ ಯಾವುದೇ ಬದಲಾವಣೆಯನ್ನು ಮುನ್ಸೂಚನಾರಹಿತವಾಗಿ ಮಾಡಬಹುದು.
7. ಸಂಯುಕ್ತ ಸಹಕಾರಿಯು ಯಾವುದೇ ಅರ್ಜಿಯನ್ನು ಕಾರಣವನ್ನು ನೀಡದೆ ತಿರಸ್ಕರಿಸಬಹುದಾಗಿರುತ್ತದೆ.
8. ಸಂಯುಕ್ತ ಸಹಕಾರಿಯು ಯಾವುದೇ ಹುದ್ದೆಗೆ ಸಂಬಂಧಿಸಿದಂತೆ ಬೇರೆ ಬೇರೆಯಾದ ಸೇವಾ ಷರತ್ತುಗಳನ್ನು ವಿಧಿಸಬಹುದಾಗಿದೆ.
9. ಆಯ್ಕೆಯಾದ ಅಭ್ಯರ್ಥಿಗಳು ಸಂಯುಕ್ತ ಸಹಕಾರಿಯ ಸೇವಾ ನಿಯಮಗಳಿಗೆ ಒಳಪಟ್ಟಿರುತ್ತಾರೆ.

ಸಹಿ/–

**(ಶರಣಗೌಡ ಜಿ. ಪಾಟೀಲ)**

ವ್ಯವಸ್ಥಾಪಕ ನಿರ್ದೇಶಕ



# ಸೌಹಾರ್ದ ಸಹಕಾರಿಯು ಹೇಗೆ ಸುಂದರ ಹಾಗೂ ಸದೃಢವಾಗಿ ಬೆಳೆಯಬಲ್ಲುದು...?

■ ಜಿ. ಎಸ್. ತೋಪಣ್ಣವರ, ವಿಭಾಗೀಯ ಅಧಿಕಾರಿ, ಬೆಳಗಾವಿ.

...ಹಿಂದಿನ ಸಂಚಿಕೆಯಿಂದ

29. ವ್ಯವಸ್ಥಾಪಕರು ಸಹಕಾರಿಯಲ್ಲಿ ಸುಸ್ಥಿಯಾದ ಸಾಲ ಖಾತೆಗಳನ್ನು ಪ್ರತಿ ದಿನ ಪರೀಕ್ಷಿಸಿ ಸುಸ್ತಿಬಾಕಿ ಆದ ತಕ್ಷಣ ತಾವು/ಸಿಬ್ಬಂಧಿ ಮೂಲಕ ಸುಸ್ತಿದಾರರನ್ನು ಸಂಪರ್ಕಿಸಿ ಸಾಲ ವಸೂಲಿಗೆ ದುಂಬಾಲು ಬೀಳಬೇಕು. ಸುಸ್ತಿ ಬಾಕಿ ಖಾತೆದಾರರ ವಿಷಯಗಳಲ್ಲಿ ನಿರ್ದೇಶಕರ ಸಹಾಯ ಪಡೆದು ಅವರ ವರ್ಚಸ್ಸಿನ ಪ್ರಯೋಜನದಿಂದ ಸಾಲ ವಸೂಲು ಮಾಡಬೇಕು. ಪ್ರತಿ ತಿಂಗಳು ವ್ಯವಸ್ಥಾಪಕರು ಠೇವುಗಳ ಬೆಳವಣಿಗೆ, ಬರುವ ತಿಂಗಳು ಠೇವು ಮರುಪಾವತಿ ರಕ್ಕಮುಗಳ ವಿವರಗಳು ಸಾಲಗಳ ಬಾಕಿ ವಿವರಗಳು ಸಾಲಗಳ ಸುಸ್ತಿ ಬಾಕಿ ವಿವರಗಳು ಹಾಗೂ ಸಾಲ ವಸೂಲಿಗೆ ತಾವು ಮಾಡಿದ ಪ್ರಯತ್ನಗಳು, ವಸೂಲು ಮಾಡಿದ ಸಾಲಗಳು, ಬಡ್ಡಿಗಳು, ವಸೂಲಿಗೆ ತೊಂದರೆಯಿದ್ದ ಸಾಲ ಖಾತೆಗಳು ಇವುಗಳನ್ನು ನಿರ್ದೇಶಕ ಮಂಡಳಿಯ ಸಭೆಯಲ್ಲಿ ಇರಿಸಿ ಅವುಗಳ ಮೇಲೆ ಚರ್ಚಿಸಬೇಕು. ಸುಸ್ತಿ ಬಾಕಿ ವಸೂಲಿ ವಿಷಯದ ಮೇಲೆ ಅವರಿಂದ ಸೂಚನೆ ಮತ್ತು ಸಲಹೆಗಳನ್ನು ಪಡೆಯಬೇಕು.

30. ಯಾವುದೇ ಸಾಲಗಳು ವರ್ಷಗಟ್ಟಲೆ ಸುಸ್ತಿ ಬಾಕಿಗಳಾಗಿ ಉಳಿದಲ್ಲಿ ನಿರ್ದೇಶಕ ಮಂಡಳಿಯು ಸದರಿ ಖಾತೆಗಳ ವಿಷಯದಲ್ಲಿ ಪಂಚಾಯತಿ ದಾವೆ ಮಾಡಲು ನಿರ್ಧರಿಸಬೇಕು. ಪಂಚಾಯತಿ ದಾವೆಯಲ್ಲಿ ಅವಾರ್ಡ ಪಡೆದು ಸದರಿ ಅವಾರ್ಡ ರಕ್ಕಮನ್ನು ಸೇಲ ಅಧಿಕಾರಿ/ಸಿವಿಲ್ ಕೋರ್ಟ ಮುಖಾಂತರ ದುಂಬಾಲು ಬೀಳುವುದರೊಂದಿಗೆ ವಸೂಲು ಮಾಡಬೇಕು. ಹೀಗಾಗಿ ಸುಸ್ತಿ ಬಾಕಿ ಪ್ರಮಾಣ ಕನಿಷ್ಠ ಇರುವಂತೆ ಅಥವಾ ಪೂರ್ತಿ ವಸೂಲಾಗುವಂತೆ ಸಹಕಾರಿಯು ಕಾರ್ಯ ನಿರ್ವಹಿಸಬೇಕು.

31. ಸಹಕಾರಿಗಳು ಪ್ರತಿ ವರ್ಷದ ಲೆಕ್ಕಪರಿಶೋಧನೆ ಯನ್ನು ಕಾನೂನು ಪ್ರಕಾರ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ನಿಯಮಿಸಲ್ಪಟ್ಟ ಹಾಗೂ ಸಂಯುಕ್ತ ಸಹಕಾರಿಯು ಅನುಮೋದಿ ಸಲ್ಪಟ್ಟ ಲೆಕ್ಕಪರಿಶೋಧಕರ ಯಾದಿಯಲ್ಲಿ ಹೆಸರವುಳ್ಳ ಲೆಕ್ಕಪರಿಶೋಧಕರಿಂದ ತಪ್ಪದೇ ವೇಳೆಗೆ ಸರಿಯಾಗಿ ಮಾಡಿಸಿಕೊಳ್ಳಬೇಕು. ಆಡಿಟರರಿಗೆ ಆವಶ್ಯವಿದ್ದ ಲೆಕ್ಕಪತ್ರಕ್ಕೆ ಹಾಗೂ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ಮಾಹಿತಿಗಳನ್ನು ಹಾಗೂ ತಖ್ತೆಗಳನ್ನು ಸರಿಯಾದ ವೇಳೆಗೆ, ಸರಿಯಾಗಿ, ಅವರು ಬೇಡಿದ ತಕ್ಷಣ ಪೂರೈಸಬೇಕು. ಆಡಿಟ ವರದಿ ಬಂದನಂತರ ಸದರ ವರದಿಯನ್ನು ನಿರ್ದೇಶಕ ಮಂಡಳಿಯ ಮುಂದೆ ಇರಿಸಿ, ಅದರ ಮೇಲೆ ಚರ್ಚಿಸಿ ನಂತರ ವರದಿಯಲ್ಲಿಯ ಲೋಪ ದೋಷಗಳ ಮೇಲೆ ತಿದ್ದುಪಡಿ ವರದಿಯನ್ನು ತಯಾರಿಸಿ ಸಾಮಾನ್ಯ ಸಭೆಯಲ್ಲಿ ತಪ್ಪದೆ ಇರಿಸಿ ಅವರ ಅನುಮೋದನೆ ಪಡೆಯಬೇಕು.

32. ಪ್ರತಿಯೊಂದ ಸಹಕಾರಿಯು ಕಾನೂನು ಪ್ರಕಾರ ಸಹಕಾರಿ ವರ್ಷ ಕೂನೆಗೊಂಡ ಆರು ತಿಂಗಳ ಒಳಗಾಗಿ ವಾರ್ಷಿಕ ಸಾಮಾನ್ಯ ಸರ್ವಸಾಧಾರಣ ಸಭೆಯನ್ನು ಕೊನೆಗೊಂಡ ವರ್ಷದ ಲೆಕ್ಕಪತ್ರ ಪರಿಶೀಲನೆ ಹಾಗೂ ಸಮ್ಮತಿಗಾಗಿ ಅಲ್ಲದೇ ಉಪನಿಭಂದನೆಯಲ್ಲಿ ನಮೂದಿಸಿದ ಇತರ ವಿಷಯಗಳ ಮೇಲೆ ಚರ್ಚಿಸಿ ನಿರ್ಣಯ ಕೈಕೊಳ್ಳಲು ಜರುಗಿಸಬೇಕು. ಅದಲ್ಲದೇ ಸಹಕಾರಿಯು ವರ್ಷದ ಮಧ್ಯದಲ್ಲಿ ಯಾವುದೇ ತಿಂಗಳಲ್ಲಿ ಸಹಕಾರಿ ಆಡಳಿತ, ವ್ಯವಹಾರಗಳಿಗೆ ಸಂಬಂಧಪಟ್ಟ ವಿಷಯಗಳ ಮೇಲೆ ಚರ್ಚಿಸಿ ನಿರ್ಣಯಗಳನ್ನು ಸ್ವೀಕರಿಸಲು ವಿಶೇಷ ಸರ್ವಸಾಧಾರಣ ಸಭೆಯನ್ನು ಕರೆಯಬಹುದಾಗಿದೆ.

33. ಸಹಕಾರಿಯು ಪ್ರತಿ ವರ್ಷ ತಾನು ಗಳಿಸಿದ ನಿವ್ವಳ ಲಾಭವನ್ನು ತನ್ನ ಉಪನಿಬಂಧನೆ, ಕಾನೂನು ಹಾಗೂ ಸಂಯುಕ್ತ ಸಹಕಾರಿಯ ಪರಿಪತ್ರಗಳ ಪ್ರಕಾರ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ವಿಭಜನೆ ಮಾಡಬೇಕು. ಲಾಭ ವಿಭಜನೆ ಮಾಡಿದ ನಂತರ ಉಳಿದ ಭಾಗಶಃ ಲಾಭವನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಬೇಕು. ಯಾವುದೇ ಕಾಲಕ್ಕೆ ಲಾಭ ವಿಭಾಗಣೆಯನ್ನು ಉಪನಿಬಂಧನೆಯ ವ್ಯತಿರಿಕ್ತ ಮಾಡಬಾರದು. ಲಾಭದಲ್ಲಿ ತೆಗೆದಿರಿಸಿದ ಶಿಕ್ಷಣ ನಿಧಿಯನ್ನು ಕೂಡಲೇ ಸಂಯುಕ್ತ ಸಹಕಾರಿಗೆ ಕಳುಹಿಸಬೇಕು ಹಾಗೂ ವಿಭಜನೆಯಲ್ಲಿ ತೆಗೆದಿಟ್ಟ ಕಾಯ್ದಿಟ್ಟ ನಿಧಿಯನ್ನು ಕಾನೂನು, ನಿಯಮ ಹಾಗೂ ಪರಿಪತ್ರಗಳ ಪ್ರಕಾರ ಸಂಸ್ಥೆಯ ಹೊರಗಡೆ ಬ್ಯಾಂಕುಗಳಲ್ಲಿ ಅಥವಾ ಸರ್ಕಾರಿ ಭದ್ರತೆಗಳಲ್ಲಿ ತೊಡಗಿಸಬೇಕು. ಯಾವುದೇ ಕಾಲಕ್ಕೆ ಕಾಯ್ದಿಟ್ಟ ನಿಧಿಯನ್ನು ಸಹಕಾರಿಯು ತನ್ನ ವ್ಯವಹಾರದಲ್ಲಿ ಉಪಯೋಗಿಸತಕ್ಕದ್ದಲ್ಲ. ಸಹಕಾರಿಯು ತಾನು ಹೊಂದಿದ ಮತ ಹಾಕುವ ಹಾಗೂ ಶೇರು ಹೊಂದಿದ ಮತ ಹಾಕಲಾಗದ (Associate Member) ಇವರಿಗೆ ಡಿವಿಡೆಂಡನ್ನು ಸರಿಯಾದ ದರದಲ್ಲಿ ವಿತರಿಸಬೇಕು. ಸದರಿ ಹಣವನ್ನು ಅವರಿಗೆ ನಗದು ರೂಪದಲ್ಲಾಗಲಿ ಅಥವಾ ಅವರು ಹೊಂದಿದ ಉಳಿತಾಯ ಖಾತೆಗಾಗಲಿ ಜಮೆ ಮಾಡುವ ಮೂಲಕ ಕೊಡಬೇಕು.

34) ಸಹಕಾರಿಯು ತಾನು ಪ್ರತಿ ವರ್ಷ ಸಂಯುಕ್ತ ಸಹಕಾರಿಯ ಪರಿಪತ್ರ/ಆದೇಶದ ಮೇರೆಗೆ, ಕಾನೂನು ಮತ್ತು ನಿಯಮಗಳ ಅನುಸಾರ ವಾರ್ಷಿಕ ವರ್ಗಣಿ ರಕ್ಕಮಗಳನ್ನು ಅದಲ್ಲದೆ ನಿವ್ವಳ ಲಾಭದ ಮೇಲೆ ಆಗುವ ಶಿಕ್ಷಣ ನಿಧಿಯನ್ನು ಸಂಯುಕ್ತ ಸಹಕಾರಿಗೆ ತಪ್ಪದೆ ಕಳುಹಿಸಬೇಕು. ಕಾಯ್ದೆ, ನಿಯಮ ಹಾಗೂ ಸಂಯುಕ್ತ ಸಹಕಾರಿಯ ಪರಿಪತ್ರದ ಪ್ರಕಾರ ಸೌಹಾರ್ದ ಸಹಕಾರಿಗಳು ತಾವು ಕಳುಹಿಸಲು ನಿಗದಿಪಡಿಸಿದ ಎಲ್ಲ ವರದಿಗಳನ್ನು, ಆರ್ಥಿಕ ತಕ್ತೆಗಳನ್ನು, ಮಾಹಿತಿಗಳನ್ನು ಮೇಲಿಂದ ಮೇಲೆ ನಿಯಮಿತವಾಗಿ ಅಧಿಕಾರಿಗಳಿಗೆ, ಸಂಸ್ಥೆಗಳಿಗೆ ಸರಿಯಾಗಿ ಹಾಗೂ ನಿಯಮಿತವಾಗಿ ಕಳುಹಿಸಬೇಕು.

35) ಸಹಕಾರಿಯು ಪ್ರತಿ ವರ್ಷ ಎಪ್ರೀಲ ಕೊನೆಯ ವಾರದಲ್ಲಿ ಮುಂದಿನ ಆರ್ಥಿಕ ವರ್ಷದ ಹಣಕಾಸಿನ ಬಜೆಟನ್ನು ತಯಾರಿಸಬೇಕು. ಆವೇಳೆಗೆ ತಾನು ಸದರಿ ವರ್ಷದಲ್ಲಿ ಸಂಗ್ರಹಿಸಬಹುದಾದ ಠೇವುಗಳು, ಕೊಡಬಹುದಾದ ಸಾಲಗಳು ಹಾಗೂ ವಸೂಲಿ ಮಾಡಬಹುದಾದ ಸುಸ್ತಿ ಸಾಲಗಳ ರಕ್ಕಮಗಳು ಇವುಗಳ ಬಗ್ಗೆ ಟಾರ್ಗೆಟ ನಿರ್ಧರಿಸಬೇಕು. ಸದರಿ ಟಾರ್ಗೆಟನಲ್ಲಿಯ ಸಾಧನೆಗಳನ್ನು ಪ್ರತಿ ಎರಡು ತಿಂಗಳಿಗೊಮ್ಮೆ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಪರಿಶೀಲಿಸಬೇಕು. ಅವುಗಳ ಮೇಲೆ ನಿರ್ದೇಶಕ ಮಂಡಳಿಯು ಹೆಚ್ಚಿನ ಸಾಧನೆ ಗೈಯಲು ಸಲಹೆ ಸೂಚನೆಗಳನ್ನು ಕೊಡಬೇಕು.

36) ಸಹಕಾರಿಯು ಕಾನೂನು ಪ್ರಕಾರ ಪ್ರತಿ ಐದು ವರ್ಷಕ್ಕೊಮ್ಮೆ ಆಡಳಿತ ಮಂಡಳಿಗೆ ಹಿಂದಿನ ಆಡಳಿತ ಮಂಡಳಿಯ ಅಧಿಕಾರ ಅವಧಿ ಮುಗಿದ ತಕ್ಷಣ ಸಹಕಾರಿ ಇಲಾಖೆಯನ್ನು ಸಂಪರ್ಕಿಸಿ ಚುನಾವಣೆ ಜರುಗಿಸಬೇಕು.

ಈ ಮೇಲಿನ ಅಂಶಗಳ ಅಳವಡಿಕೆಯಿಂದ ಸಹಕಾರಿಯು ಸದೃಢವಾಗಿ ಹಾಗೂ ಸುಂದರವಾಗಿ ಬೆಳೆದು ಸದಸ್ಯರ ಹಾಗೂ ಠೇವುದಾರರ ಕಾಮಧೇನುವಾಗುವುದರಲ್ಲಿ ಸಂಶಯವಿಲ್ಲ.

(ಮುಕ್ತಾಯ)



■

# ಧರ್ಮನ್ಯಾಸ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ದಶಮಾನೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ




ಶಿವಮೊಗ್ಗ ಜಿಲ್ಲೆಯ ಧರ್ಮನ್ಯಾಸ ಸೌಹಾರ್ದ ಸಹಕಾರಿಯಲ್ಲಿ ದಶಮಾನೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶಚಂದ್ರರವರು ಭಾಗವಹಿಸಿ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಹಕಾರಿಗಳು, ಮುಕ್ತವಾದ ಆರ್ಥಿಕ ಚಟುವಟಿಕೆ ಮಾಡುವ ಸಾಮಾನ್ಯ ಸದಸ್ಯರಿಗೆ ಬೇಕಾದ ಎಲ್ಲ ರೀತಿಯ ಸೌಕರ್ಯ ಕಲ್ಪಿಸಿಕೊಡುವ ಅವಕಾಶಗಳಿವೆ. ಹೀಗಾಗಿ ಕರ್ನಾಟಕದ ಈ ಕಾನೂನು ದೇಶಾದ್ಯಂತ ಜನಪ್ರೀಯವಾಗುತ್ತಿದೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ರವಿಕುಮಾರರವರು ಮಾತನಾಡಿ ಧರ್ಮನ್ಯಾಸ ಸೌಹಾರ್ದ ಸಹಕಾರಿಯ ಸಾಧನೆಗಳನ್ನು ವಿವರಿಸಿ ಗ್ರಾಮದ ಚಟುವಟಿಕೆಗಳಿಗೆ, ಶಿಶು ವಿಹಾರ, ಸರ್ಕಾರಿ ಶಾಲೆ, ವೇದಪಾಠಶಾಲೆ, ಗಮಕ ಭವನ ಮುಂತಾದವುಗಳಿಗೆ ನೆರವು ನೀಡಿರುವುದರ ಜೊತೆಗೆ ವಿದ್ಯಾರ್ಥಿ ವೇತನ, ಪ್ರತಿಭಾ ಪುರಸ್ಕಾರ ಹೀಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

## ಗುಲ್ಬರ್ಗಾದಲ್ಲಿ ಪುಣ್ಯಕೋಟಿ ಸೌಹಾರ್ದ ಸಹಕಾರಿಯ ಉದ್ಘಾಟನೆ



ಗುಲ್ಬರ್ಗಾದಲ್ಲಿ ಪುಣ್ಯಕೋಟಿ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಸುಕೋ ಬ್ಯಾಂಕ್ ಅಧ್ಯಕ್ಷ ಹಾಗೂ ವಿಧಾನ ಪರಿಷತ ಸದಸ್ಯ ಶ್ರೀ ಮನೋಹರ ಮಸ್ಕಿಯವರು ನೆರವೇರಿಸಿ ಸಹಕಾರಿಗೆ ಶುಭಕೋರಿ ಸಹಕಾರಿ ಸಂಸ್ಥೆಗಳ ಮೂಲಕ ಜನಸಾಮಾನ್ಯರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು ಸಾಧ್ಯವಿದೆ. ಸಹಕಾರಿ ಸಾಲ ಕೇವಲ ಕೆಲವೇ ಜನರ ಅಂದರೆ ಸಮಾಜದ ಮುಂಚೂಣಿಯಲ್ಲಿರುವವರಿಗೆ ಮಾತ್ರ ದೊರಕಿದರೆ ಸಾಲದು, ಜನ ಸಾಮಾನ್ಯರಿಗೆ ದೊರಬೇಕು. ಅದಕ್ಕಾಗಿ ಈ ಸಹಕಾರಿಗಳು ಹೆಚ್ಚಿನ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಉಮಾಕಾಂತ ನಿಗ್ಗುಡಗಿ, ಶ್ರೀ ಶ್ರೀನಿವಾಸ ಸಿರನೂರಕರ, ಶ್ರೀ ಗೋಪಾಲಕೃಷ್ಣ ರಘೋಜಿ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ. ಜಿ. ಪಾಟೀಲ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಎಸ್.ಮಹಾಗಾಂವಕರ ಸಹಕಾರಿಯ ನಿರ್ದೇಶಕರು ಸದಸ್ಯರು ಹಾಗೂ ಅನೇಕ ಗಣ್ಯರು ಭಾಗವಹಿಸಿದ್ದರು.

ಶ್ರೀಮತಿ ಶಕುಂತಲಾ ಮುತ್ತಿಯವರಿಂದ ಪ್ರಾರ್ಥನೆ, ಕಾರ್ಯದರ್ಶಿ ಶ್ರೀ ಮಹಾಲಿಂಗ ಮಹಗಾಂವಕರರಿಂದ ಸ್ವಾಗತ ಹಾಗೂ ವಂದನಾರ್ಪಣೆಯನ್ನು ಶ್ರೀ ಸಂಜಯ ಮಾಕಲರವರು ನೆರವೇರಿಸಿದರು.

## ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿಗೆ ರೂ 1.42 ಕೋಟಿಗೂ ಅಧಿಕ ಲಾಭ

ಬೆಳಗಾವಿ ಜಿಲ್ಲೆಯ ಬೋರ್‌ಗಾವ್ ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿಯು ಕಳೆದ ಎರಡು ದಶಕಗಳಿಂದ ಉತ್ತಮ ಸಾಧನೆಯನ್ನು ಮಾಡುತ್ತ ಗ್ರಾಮೀಣ ಭಾಗದ ಅಗ್ರಗಣ್ಯ ಸೌಹಾರ್ದ ಸಹಕಾರಿ ಎಂದು ಹೆಸರು ಪಡೆದಿದೆ.ಮಾರ್ಚ್ 2011ಕ್ಕೆ 1ಕೋಟಿ, 93 ಲಕ್ಷ ಪಾಲು ಬಂಡವಾಳ 5691 ಸದಸ್ಯರು, 10ಕೋಟಿ 66 ಲಕ್ಷ ನಿಧಿಗಳು, 128 ಕೋಟಿ ರೂಗಳ ಠೇವಣಿ 57 ಕೋಟಿ ರೂಗಳ ಸಾಲ ವಿತರಣೆ 81 ಕೋಟಿ 10 ಲಕ್ಷ ರೂಗಳ ಹೂಡಿಕೆ ಯಿದ್ದು 90.75% ಸಾಲ ವಸೂಲಾತಿಉಇದೆ. 15 ಶಾಖೆಗಳನ್ನು ಹೊಂದಿದ್ದು ಎಲ್ಲ ಶಾಖೆಗಳು ಲಾಭದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸಂಯುಕ್ತ ಸಹಕಾರಿಯ ನಿರ್ದೇಶಕ ಹಾಗೂ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಶ್ರೀ ರಾವಸಾಹೇಬ್ ಪಾಟೀಲ ಇವರ ಮಾರ್ಗದರ್ಶನದಲ್ಲಿ ಈ ಸಹಕಾರಿಯ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಬೇರೆ ಸಹಕಾರಿಗಳಿಗೆ ಮಾದರಿ ಹಾಗೂ ಅನುಕರಣೀಯವಾಗಿದೆ.

## ಗುಲ್ಬರ್ಗಾದಲ್ಲಿ ಜನಶ್ರೀ ಸೌಹಾರ್ದ ಸಹಕಾರಿಯ ಉದ್ಘಾಟನೆ



ಗುಲ್ಬರ್ಗಾದಲ್ಲಿ ಜನಶ್ರೀ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಸುಕೋ ಬ್ಯಾಂಕ್ ಅಧ್ಯಕ್ಷ ಹಾಗೂ ವಿಧಾನ ಪರಿಷತ ಸದಸ್ಯ ಶ್ರೀ ಮನೋಹರ ಮಸ್ಕಿಯವರು ನೆರವೇರಿಸಿದರು.

## ಕೊರಟಗೆರೆಯಲ್ಲಿ ಕೆ.ಎನ್.ಆರ್. ಪತ್ತಿನ ಸೌಹಾರ್ದ ಸಹಕಾರಿಯ ಇ-ಸ್ಟಾಂಪಿಂಗ್ ಉದ್ಘಾಟನೆ



ತುಮಕೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರು, ಕೆ.ಎನ್.ಆರ್.ಪತ್ತಿನ ಸೌಹಾರ್ದ ಸಹಕಾರಿಯ 3ನೇಯ ಇ-ಸ್ಟಾಂಪಿಂಗ್ ಶಾಖೆಯನ್ನು ಕೊರಟಗೆರೆಯಲ್ಲಿ ಉದ್ಘಾಟನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್.ಲಕ್ಷ್ಮೀನಾರಾಯಣ, ಉಪಾಧ್ಯಕ್ಷ ಶ್ರೀ ಕೆ. ಚಂದ್ರಶೇಖರ, ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಟಿ.ವಿ.ನರಸಿಂಹಮೂರ್ತಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಹನುಮಾನ ಸಹಕಾರಿಗಳಾದ ಶ್ರೀ ಬಲರಾಮಯ್ಯ ಮುಂತಾದವರು ಉಪಸ್ಥಿತರಿದ್ದರು.

# ಸುದರ್ಶನ ಸೌಹಾರ್ದ ಸಹಕಾರಿಯ 9ನೇ ಸಾಮಾನ್ಯ ಸಭೆ ಹಾಗೂ ಕಟ್ಟಡದ ಉದ್ಘಾಟನೆ

ಶಿವಮೊಗ್ಗ ಜಿಲ್ಲೆಯ ಮತ್ತೂರಿನ ಸುದರ್ಶನ ಸೌಹಾರ್ದ ಸಹಕಾರಿಯ 9ನೇ ಸಾಮಾನ್ಯ ಸಭೆಯ ಸಂದರ್ಭದಲ್ಲಿ ನೂತನ ಕಟ್ಟಡ "ವಿಶ್ವರೂಪ" ವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ವಿಧಾನ ಪರಿಷತ ಸದಸ್ಯ ಶ್ರೀ ಸಿದ್ಧರಾಮಣ್ಣನವರು ಮುಖ್ಯ ಅತಿಥಿಯಾಗಿ ಆಗಮಿಸಿ ಆರ್ಥಿಕ ಅಭಿವೃದ್ಧಿ ಸಾಧನೆಯಲ್ಲಿ ಸರಕಾರಿ ಹಾಗೂ ಖಾಸಗಿ ವಲಯಗಳು ಸಂಪೂರ್ಣ ವಿಫಲವಾಗಿದ್ದು ಬಲಿಷ್ಠ ರಾಷ್ಟ್ರದ ನಿರ್ಮಾಣಕ್ಕೆ ಸಹಕಾರ ಕ್ಷೇತ್ರವೇ ಒಂದು ಉತ್ತಮ ಸಾಧನವಾಗಿದೆ ಇದನ್ನು ಬೆಂಬಲಿಸಬೇಕು. ಬೆಳೆಯಲು ಸರ್ವವಿಧವಾದ ಸಹಕಾರ ನೀಡಬೇಕು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ರವಿಕುಮಾರರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ಎಮ್.ಜಿ.ನಾಗೇಶ ರವರ ಸ್ವಾಗತ ಶ್ರೀ ಪಟ್ಟಾಭಿರಾಮರವರ ವಂದನೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.




## ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಚೇರಿಯಲ್ಲಿ ಸ್ವಾತಂತ್ರ ದಿನಾಚರಣೆ



ಸಂಯುಕ್ತ ಸಹಕಾರಿಯ ಬೆಳಗಾವಿ ವಿಭಾಗೀಯ ಕಚೇರಿಯಲ್ಲಿ ಬೆಳಗಾವಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹಾಗೂ ಬೆಳಗಾವಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಬಾಳಾಸಾಹೇಬ ಕಂಗ್ರಾಳಕರ್‌ರವರು ಧ್ವಜಾರೋಹಣ ಮಾಡಿ ರಾಷ್ಟ್ರೀಯ ಐಕ್ಯತಾ ಪ್ರತಿಜ್ಞಾ ವಿಧಿಯನ್ನು ಭೋದಿಸುವುದರ ಮೂಲಕ ಸ್ವಾತಂತ್ರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಯ ಎಲ್ಲ ಅಧಿಕಾರಿಗಳು, ಅನೇಕ ಸಹಕಾರಿಗಳ ಪಧಾಧಿಕಾರಿಗಳು, ಅಧಿಕಾರಿಗಳು ಹಾಗೂ ಗಣ್ಯರು ಭಾಗವಹಿಸಿದ್ದರು.



**ಗುಲ್ಬರ್ಗದ ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯ ಸರ್ವಸದಸ್ಯರ ಆರನೆಯ ವಾರ್ಷಿಕ ಮಹಾಸಭೆ ದಿನಾಂಕ 28–08–2011ರಂದು ನಡೆಯಿತು. 2010–11ನೇ ವಾರ್ಷಿಕ ವರಧಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಕಳೆದ ಸಾಲಿನ ಲಾಭಾಂಶವನ್ನು ಶೇ.9ರಂತೆ ನೀಡಲು ಅನುಮೋದನೆ ಪಡೆಯಲಾಯಿತು.**

## ಮಯೂರ ಸೌಹಾರ್ದ ಸಹಕಾರಿಯ ಎರಡನೇಯ ಶಾಖೆಯ ವಾರ್ಷಿಕೋತ್ಸವ



ಮಯೂರ ಸೌಹಾರ್ದ ಸಹಕಾರಿಯ ಎರಡನೇಯ ಶಾಖೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಪ್ರೊ.ಕುಮಾರಸ್ವಾಮಿಯವರು ಕುಟುಂಬ ಆಧಾರಿತ ಉದ್ಯಮಗಳು 96% ಲಾಭದಲ್ಲಿರುವುದನ್ನು ಉದಾಹರಣೆಗಳೊಂದಿಗೆ ಉಲ್ಲೇಖಿಸಿದರು. ಭಾರತದ ಕುಟುಂಬ ಜೀವನ ಪದ್ಧತಿ ವಿಶ್ವಕ್ಕೆ ಮಾದರಿ, ವಿದೇಶಿ ಸಂಸ್ಕೃತಿ ಅಂಧಾನುಕರಣೆ ಅವನತಿಗೆ ದಾರಿ ಎಂದು ತಿಳಿಸಿದರು.

ಮಯೂರ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಎಮ್.ಎಸ್., ವೆಂಕಟೇಶ್ ಮಾತನಾಡಿ ಆರ್ಥಿಕ ಶುದ್ಧತೆ ಆರ್ಥಿಕ ಭದ್ರತೆ ಸಹಕಾರಿ ಸಂಸ್ಥೆಗಳಲ್ಲಿರುವುದರಿಂದ ಪ್ರತಿ ವರ್ಷ ಉತ್ತಮ ಫಲಿತಾಶ ಬರುತ್ತಿದೆ. ಈ ಸಲ ಶೇಕಡಾ 13 ರಷ್ಟು ಲಾಭಾಂಶವನ್ನು ಸದಸ್ಯರಿಗೆ ನೀಡಲಾಗಿದೆ ಎಂದರು.

## ಮಹಾಯೋಗಿವೇಮನ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಇ ಸ್ಟ್ಯಾಂಪಿಂಗ್‌ಉದಾಟನೆ



ದಿನಾಂಕ 18/07/2011 ರ ಸೋಮವಾರ ಬೆಂಗಳೂರು ನಗರ ಜಿಲ್ಲೆಯ, ಯಲಹಂಕ ಉಪನಗರದಲ್ಲಿರುವ ಮಹಾಯೋಗಿವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದಲ್ಲಿ ಇ ಸ್ಟ್ಯಾಂಪಿಂಗ್ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಮುನಿರೆಡ್ಡಿ ಉದಾಟಿಸಿದರು, ನಿರ್ದೇಶಕರಾದ ಶ್ರೀ ಎಂ.ಎನ್ ರೆಡ್ಡಿ, ಶ್ರೀ ಆರ್.ಸಂಪಂಗಿರೆಡ್ಡಿ, ಬಿಬಿಎಂಪಿ ಸದಸ್ಯರಾದ ಶ್ರೀ ಸಿ.ಆರ್. ಜಯಪ್ಪರೆಡ್ಡಿ ಮತ್ತು ಶ್ರೀ ಭೈರಾರೆಡ್ಡಿಯವರು ಉಪಸ್ಥಿತರಿದ್ದರು.

# ಸೌಹಾರ್ದ ಕಾಯಿದೆಯಡಿ ಸಂಯುಕ್ತ ಸಹಕಾರಿ, ನಿಬಂಧಕರು ಮಾಡಬೇಕಾದ ಕೆಲಸ ನಿರ್ವಹಿಸುತ್ತಿದೆಯೇ?



**ಸಿ.ಎನ್. ಪರಶಿವಮೂರ್ತಿ**
ಸಹಕಾರ ಸಂಘಗಳ
ನಿವೃತ್ತ ಅಪರ ನಿಬಂಧಕರು

...ಹಿಂದಿನ ಸಂಚಿಕೆಯಿಂದ

ಅಂದರೆ ಒಬ್ಬ ಅಧಿಕಾರಿ ತಪ್ಪು ನಿರ್ಧಾರ ತೆಗೆದುಕೊಂಡರೆ, ಅದನ್ನು ಸರಿಪಡಿಸಲು ವಿವಿಧ ಮಟ್ಟದ ಪ್ರಾಧಿಕಾರಿಗಳಿವೆ. ಆದ್ದರಿಂದ ಅವರ ಜವಾಬ್ದಾರಿಯನ್ನು ನಿಗಧಿಪಡಿಸಿ ಶಿಕ್ಷೆ ವಿಧಿಸಲೂ ಅವಕಾಶಗಳಿವೆ. ಇದರ ಜೊತೆಗೆ ಇಲಾಖಾಧಿಕಾರಿಗಳು ಸಹಕಾರ ಸಂಘಗಳಿಗೆ ನಷ್ಟ ಉಂಟು ಮಾಡಿದರೆ, ಅವರ ಮೇಲೆ ಶಿಸ್ತು ಕ್ರಮದ ಜೊತೆ, ನಷ್ಟವನ್ನು ವಸೂಲಿ ಮಾಡಲು ಅವಕಾಶ ಕಲ್ಪಿಸಿದೆ.

ಆದರೆ ನಿಬಂಧಕರ ಅಧಿಕಾರಗಳನ್ನು ಚಲಾಯಿಸುವ ಜವಾಬ್ದಾರಿ ಹೊತ್ತಿರುವ ಸಂಯುಕ್ತ ಸಹಕಾರಿ ನಿರ್ದೇಶಕರು, ಎಷ್ಟು ಪ್ರಮಾನದಲ್ಲಿ ಅಧಿಕಾರ, ಅದರಲ್ಲೂ ಶಾಸನಬದ್ಧ ಅಧಿಕಾರಗಳನ್ನು ಚಲಾಯಿಸಲು ಪಕ್ವರಾಗಿದ್ದಾರೆ ಎಂಬುದನ್ನು ಯಾವುದಾದರು ಮಟ್ಟದಲ್ಲಿ ಪರಿಶೀಲಿಸುವುದು ಅವಶ್ಯಕತೆ ಇದೆ. ಸಹಕಾರಿಗಳ್ನು ಆರ್ಥಿಕ ಸಂಸ್ಥೆಗಳೆಂದು ಪರಿಗಣಿಸಲೇಬೇಕು, ಏಕೆಂದರೆ ಪ್ರಜಾಪ್ರಭುತ್ವದಡಿ ಆಯ್ಕೆಯಾದ ಸಂಯುಕ್ತ ಸಹಕಾರಿಯ ನಿರ್ದೇಶಕರು ಚುನಾವಣೆಯಲ್ಲಿ ಅವರು ಗಳಿಸಿದ ಮತಗಳ ಆಧಾರದ ಮೇಲೆ ಆಯ್ಕೆಯಾಗುತ್ತಾರೆ. ಅವರು ಪರಿಣಿತಿ ಹೊಂದಿದ ಬಗ್ಗೆ ಸಾಮಾನ್ಯ ಮತದಾರನಿಗೆ ತಿಳಿ ಹೇಳುವ ಅವಕಾಶವೇ ಇಲ್ಲ. ಅಂದರೆ ಸಂಯುಕ್ತ ಸಹಕಾರಿಯ ಆಡಳಿತಮಂಡಳಿಗೆ ಆಯ್ಕೆ ಬಯಸಿದ ವ್ಯಕ್ತಿ ಅರ್ಹತೆಯನ್ನು ಗಮನಿಸಲು ಸದಸ್ಯ ಸಹಕಾರಿಗಳಿಗೆ ಅವಕಾಶವಿಲ್ಲ. ಸಂಖ್ಯೆ ಆಧಾರದ ಮೇಲೆ ಆಯ್ಕೆಯಾದಾಗ ಅವನ ಅರ್ಹತೆ/ಅನುಭವ ಗಣನೆಗೆ ಬರುವುದಿಲ್ಲ. ವೈಯಕ್ತಿಕ ಸಂಪರ್ಕದ ಆಧಾರದ ಮೇಲೆ ಆಯ್ಕೆಯಾದ ನಿರ್ದೇಶಕ, ಸೌಹಾರ್ದ ಕಾಯಿದೆಯಲ್ಲಿ, ಅರೆ ನ್ಯಾಯಿಕ ಆದೇಶಗಳನ್ನು ಹೊರಡಿಸುವ ಅಧಿಕಾರ ಸಂಯುಕ್ತ ಸಹಕರಿಗೆ ಇರುವುದರಿಂದ, ಆಯ್ಕೆಯಾದ ನಿರ್ದೇಶಕರ ಕಾರ್ಯನಿರ್ವಹಣೆ ಗಮನಿಸುವುದು ಸಂಯುಕ್ತ ಸಹಕಾರಿ ಒಂದು ಪ್ರಾಧಿಕಾರವಾಗಿ ಗಮನಿಸಬಹುದೇ ? ನಿರ್ದೇಶಕ ತಾವು ಪ್ರತಿನಿಧಿಸುವ ಜಿಲ್ಲೆಯ ಸಕಾರಿಗಳ ಅಭಿವೃದ್ಧಿಗೆ ಶ್ರಮವಹಿಸುತ್ತಾರೆ, ಹೊಸ ಸಂಸ್ಥೆಗಳನ್ನು ಹುಟ್ಟುಹಾಕುತ್ತಾರೆ ಮತ್ತು ಎಷ್ಟು ಸಹಕಾರಿಗಳಿಗೆ ಮಾರ್ಗದರ್ಶನ, ಎಚ್ಚರಿಕೆ, ನಿಯಂತ್ರಣದ ಪಾಠ ಹೇಳು ಶಕ್ತಿ ಇದೆ? ಇದನ್ನು ಸಂಯುಕ್ತ ಸಹಕಾರಿ ಒಂದು ಸಂಸ್ಥೆಯಾಗಿ ಪರಿಶೀಲಿಸುವ ಅವಕಾಶ ಎಲ್ಲಿ ಸಿಗುತ್ತದೆ. ಒಬ್ಬ ನಿರ್ದೇಶಕ ಅವನ ಸ್ಥಾನವನ್ನು ಉಳಿಸಿಕೊಳ್ಳು ಪ್ರಯತ್ನ ಮಾಡುತ್ತಾನೆಯೇ ಹೊರತು, ಸಹಕಾರಿ ಆಂದೋಲನಕ್ಕೆ ಪೂರಕವಾದ ಕ್ರಮ ಜರುಗಿಸಿದ ಬಗ್ಗೆ ದಾಖಲೆಗಳು ಎಲ್ಲಿ ಸಿಗುತ್ತವೆ. ಈ ರೀತಿ ವಿಮರ್ಶೆ ಮಾಡುವ ಅಧಿಕಾರ/ಜವಾಬ್ದಾರಿಸಂಯುಕ್ತ ಸಹಜಕಾರಿ ಪ್ರಯತ್ನಿಸುತ್ತದೆಯೇ?

ಸಹಕಾರ ಸಂಘಗಳ ಕಾಯಿದೆ 1959 ರಲ್ಲಿ ನೋಂದಾವಣೆಯಾದ ಸಹಕಾರ ಸಂಘಗಳ ಸಂಖ್ಯೆ 35,502 (31–3–2011ಕ್ಕೆ ಇದ್ದಂತೆ) ಇದರಲ್ಲಿ ನಿಷ್ಕ್ರಿಯಗೊಂಡ ಮತ್ತು ಸಮಾಪನೆಗೊಂಡ ಸಂಘಗಳ ಸಂಖ್ಯೆ ಸುಮಾರು 5,000. ಅಂದರೆ, 30,000 ಸಹಕಾರ ಸಂಘಗಳು ಅಸ್ತಿತ್ವದಲ್ಲಿ ಇವೆ. ಇವುಗಳನ್ನು ನಿಯಂತ್ರಿಸಲು, ಮಾರ್ಗದರ್ಶನ ನೀಡಲು, ಕಾರ್ಯ ನಿರ್ವಹಿಸಲು ಸುಮಾರು 1800 ಅಧಿಕಾರಿ/ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ.

ಸೌಹಾರ್ದ ಕಾಯಿದೆ ಜಾರಿಗೆ ಬಂದ ನಂತರ ಸಹಕಾರ ಇಲಾಕೆ ಕೆಲಸ ಸೀಮಿತಗೊಂಡಿದ್ದು, ನಿಬಂಧಕರ ಕೆಲಸವನ್ನು ಸಂಯುಕ್ತ ಸಹಕಾರಿ ವಹಿಸಿಕೊಂಡಿದ್ದು, ಸುಮಾರು 1800 ಸಹಕಾರಿಗಳ ಕಾರ್ಯನಿರ್ವಹಣೆ ನೋಡಲು ಇರುವ ಅಧಿಕಾರಿಗಳ/ನೌಕರರ ಸಂಖ್ಯೆ ಎರಡು ಅಂಕಿ ಮೀಪವಿದೆ. ಇತ್ತೀಚೆಗೆ ವಿಭಾಗ ಮಟ್ಟದ ಒಂದು ಕಛೇರಿಯನ್ನು ಬೆಳಗಾವಿಯಲ್ಲಿ ತೆರೆದಿದೆ. ಆದರೆ ಕಛೇರಿಗೆ ಸಾಕಷ್ಟು ಸಿಬ್ಬಂದಿ ಇಲ್ಲ. ಸಂಯುಕ್ತ ಸಹಕಾರಿ ರಚನೆಯಾಗಿ ಹತ್ತು ವರ್ಷ ಕಳೆದಿದ್ದರೂ ಆಡಳಿತ ವ್ಯವಸ್ಥೆ ಪೂರ್ಣ ಮಾಡಲು ಸಾಧ್ಯವಾಗಿಲ್ಲ. ಎಂದರೆ, ಈ ಹೊಸ ಕಾಯಿದೆಯನ್ನು ಚುರುಕುಗೊಳಿಸಲು ಇದ್ದ ಅವಕಾಶಗಳನ್ನು ಸಾರ್ಥಕಗೊಳಿಸಿಕೊಂಡಿಲ್ಲ.

ಎಲ್ಲಿಯವರೆವಿಗೆ ಸಂಯುಕ್ತ ಸಹಕಾರಿ ತನ್ನ ಸಿಬ್ಬಂದಿ ಸಂಖ್ಯೆ, ಜಿಲ್ಲಾ ಮಟ್ಟ, ವಿಭಾಗ ಮಟ್ಟದಲ್ಲಿ ಕಛೇರಿಗಳನ್ನು ತೆಗೆದು ಸಹಕಾರಿಗಳ ಮೇಲೆ ನಿಗಾ ಇಡುವುದಿಲ್ಲವೋ, ಅಲ್ಲಿಯವರೆವಿಗೂ ನಿಬಂಧಕರು ನೆರವೇರಿಸುವ ಕೆಲಸ ಸಂಯುಕ್ತ ಸಹಕಾರಿ ನಿರ್ವಹಿಸುವುದು ಹೇಗೆ ?

ನಿಬಂಧಕರ ಕಛೇರಿಗಳು ಎಲ್ಲಿ ಇವೆಯೋ ಅಲ್ಲಿ ಸಂಯುಕ್ತ ಸಹಕಾರಿ ಕಛೇರಿಗಳು ಇದ್ದರರ ಮಾತ್ರ ಪ್ರಭಾವಿ ಪ್ರಜಾಪ್ರಭುತ್ವ ನಿಯಂತ್ರಣ ಸಾಧ್ಯ. ಆದ್ದರಿಂದ ಸಂಯುಕ್ತ ಸಹಕಾರಿ ತುರ್ತಾಗಿ ಹೆಚ್ಚಿನ ಸಂಖ್ಯೆ ಸಹಕಾರಿಗಳು ನೋಂದಾವಣೆಯಾಗಿದೆಯೋ ಅಲ್ಲಿ ಕನಿಷ್ಟ ಜಿಲ್ಲಾ ಮಟ್ಟದ ಕಛೇರಿಗಳ ನಿರ್ವಹಣೆ ಅವಶ್ಯಕ. ಸಹಕಾರಿಗಳ ನೌಕರ ನೇಮಕಾತಿ ಬಗ್ಗೆ ಅನುಸರಿಸುವ ನೀತಿ ಸಮರ್ಪಕವಾಗಿಲ್ಲ – ಇದಕ್ಕೆ ಪೂರಕವಾಗಿ ಸಂಯುಕ್ತ ಸಹಕಾರಿ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ ಸದಸ್ಯರಿಗೆ ತಿಳುವಳಿಕೆ ನೀಡುವುದು ಅವಶ್ಯಕ, ಏಕೆಮದರೆ ನಿಬಂಧಕರು ಸಹಕಾರ ಸಂಘಗಳ ನಿಯಮ 17 ಮತ್ತು 18ರಲ್ಲಿ ನೌಕರರ ನೇಮಕಾತಿ ಬ್ಗೆ ಮಾರ್ಗದರ್ಶನ ನೀಡುವಂತೆ, ಸೌಹಾರ್ದ ಕಾಯಿದೆಯಲ್ಲಿ ಸಂಯುಕ್ತ ಸಹಕಾರಿ ನಿಬಂಧಕರ ಅಧಿಕಾರ ನಿರ್ವಹಿಸುತ್ತಿರುವಂತೆ ಮಾರ್ಗದರ್ಶನ ನೀಡುವುದು ಅವಶ್ಯಕ ಮತ್ತು ಈ ಸಂಯುಕ್ತ ಸಹಕಾರಿ ಪ್ರಜಾಪ್ರಭುತ್ವದಡಿ ರಚನೆಯಾಗಿದ್ದು ಇದನ್ನು ಮಧ್ಯಪ್ರವೇಶ ಮಾಡಿದಂತೆ ಅಗುವುದಿಲ್ಲ. ಇದಕ್ಕೆ ಪ್ರಮುಖ ಕಾರಣ, ಸಂಯುಕ್ತ ಸಹಕಾರಿಗೆ ಸಂಪನ್ಮೂಲ ಕೊರತೆ. ಪ್ರತಿ ಸಹಕಾರಿಯಿಂದ ವಂತಿಗೆ ಸಂಗ್ರಹಿಸುವುದರ ಜೊತೆ ಶಿಕ್ಷಣ ಮತ್ತು ತರಬೇತಿಗಾಗಿ ಕಲಂ 10(ಫಿಫಿಖ)ರನ್ವಯ ಈ ಕೆಳಕಂಡ ಅವಕಾಶ ಕಲ್ಪಿಸಿದೆ.

10(XXI)(ಬಿ) :

"ಸಹಕಾರ ಶಿಕ್ಷಣ ನಿಧಿಗೆ ಶೇಕಡ ಮೂರು, ಇದರಲ್ಲಿ ಶೇಕಡ ಒಂದರಷ್ಟು ಸಂಯುಕ್ತ ಸಹಕಾರಿಯ ಶಿಕ್ಷಣ ನಿಧಿಗೆ ಮತ್ತು ಬಾಕಿಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು, ಇದರ ಸಹಕಾರ ಶಿಕ್ಷಣ ನಿಧಿಗೆ".

ಎಂದು ಅವಕಾಶ ಕಲ್ಪಿಸಿದೆ. ಆದರೆ ಶೇ. 2ರಲ್ಲಿ ಲಾಭಾಂಶವನ್ನು ಪಡೆಯುತ್ತಿರುವ ಸಹಕಾರ ಮಹಾಮಂಡಳ ಪ್ರಾಯೋಜಿಸುವ ತರಬೇತಿಗಳ ಸಂಖ್ಯೆ ಎಷ್ಟು ? ಶೇಕಡ 1ರಷ್ಟು ಲಾಭಾಂಶ ಪಡೆಯುತ್ತಿರುವ ಸಂಯುಕ್ತ ಸಹಕಾರಿಗಳಿಗೆ ಮತ್ತು ಅದರ ಸದಸ್ಯರಿಗೆ ಏರ್ಪಡಿಸುವ ತರಬೇತಿ ವ್ಯವಸ್ಥೆಯನ್ನು ಪರಿಶೀಲಿಸುವವರು ಯಾರು? ನಿಬಂಧಕರು ಅಥವಾ ಸರ್ಕಾರ ಈ ಬಗ್ಗೆ ಗಮನಹರಿಸಬೇಕು. ಏಕೆಂದರೆ 1959ರ ಕಾಯಿದೆಯಲ್ಲಿ ರೂಪಿತಗೊಂಡ ಸಹಕಾರ ಸಂಘಗಳಿಗೆ ತರಬೇತಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವ ಬಗ್ಗೆ ನಿಬಂಧಕರು ಪರಿಶೀಲಿಸಿ/ಪರಾಮರ್ಶಿಸುವುದನ್ನು ಸರ್ಕಾರ ಪ್ರಶ್ನಿಸುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಲಾಭಾಂಶದಿಂದ ಪಡೆದ ವಿದ್ಯಾನಿಧಿ ಹೆಚ್ಚಾಗಿದ್ದು, ಆ ಹಣದಿಂದ ಪ್ರಭಾವಿ ತರಬೇತಿ ಆಗುತ್ತಿದೆಯೇ? ಇಲ್ಲವೇ ಎಂಬುದನ್ನು ನಿಬಂಧಕರು ವಿಮರ್ಶಿಸಿದರೆ ಮಾತ್ರ, ಸಂಯುಕ್ತ ಸಹಕಾರಿಗಳಿಂದ ಸಂಗ್ರಹಿಸಿದ ಶಿಕ್ಷಣ ನಿಧಿಗೆ ಪಾವತಿಯಾದ ಶಿಕ್ಷಣ ನಿಧಿ ಸದುಪಯೋಗದ ಬಗ್ಗೆ ವಿಮರ್ಶಿಸಬೇಕು. ಆ ರಿತಿ ಮಾಡಿದಾಗ ಸೌಹಾರ್ದ ಕಾಯಿದೆ ಕಲಂ 10(XXI)(ಬಿ)ಗೆ ತಿದ್ದುಪಡಿ ತಂದು ಸಂಯುಕ್ತ ಸಹಕಾರಿಗೆ ಶೇ.2ರಷ್ಟು ಶಿಕ್ಷಣ ನಿಧಿ ಪಾವತಿಸಲು, ತಿದ್ದುಪಡಿ ತರಲು ಸೂಚಿಸಬೇಕು ಮತ್ತು ಸಹಕಾರ ಮಹಾಮಂಡಳಕ್ಕೆ ಕೊಡಬೇಕೇ ಬೇಡವೇ? ಎಂಬುದನ್ನು ನಿಬಂಧಕರು ಪರಿಶೀಲಿಸಿ ಸರ್ಕಾರಕ್ಕೆ ವರದಿ ಕೊಡುವುದು ಸೂಕ್ತ.

ಈ ರೀತಿ ಮಾಡಿದಾಗ ಸಂಯುಕ್ತ ಸಹಕಾರಿಗೆ ಸಂಪನ್ಮೂಲ ಕೊರತೆ ಇಲ್ಲವಾಗಿ ಇನ್ನೂ ಹೆಚ್ಚಿನ ಪ್ರಭಾವಿ ಶಿಕ್ಷಣ, ತರಬೇತಿ ಆಯೋಜಿಸಲು ಅನುಕೂಲವಾಗುತ್ತದೆ.

ಸಂಯುಕ್ತ ಸಹಕಾರಿಯನ್ನು ಬಲಪಡಿಸುವುದು ಅತಿ ಅವಶ್ಯಕ ಮತ್ತು ಸದಸ್ಯ ಸಹಕಾರಿಗಳನ್ನು ಜವಾಬ್ದಾರಿಯುತವಾಗಿ ಮಾಡಲು ಇದು ಅವಶ್ಯಕ. ಈ ಹಿಂದೆ 1997ರ ಕಾಯಿದೆಯಲ್ಲಿ ಚುನಾವನೆ ನಡೆಸುವ ಅಧಿಕಾರ, ಸಹಕಾರಿಗಳ ವಿಚಾರಣೆಯನ್ನು ಸಂಯುಕ್ತ ಸಹಕಾರಿಗೆ ಇದ್ದು, ಇದನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದುದಕ್ಕೆ ನಿಬಂಧಕರಿಗೆ ವರ್ಗಾಯಿಸಿತು. ಇದಕ್ಕೆ ಕಾರಣ ಸಂಯುಕ್ತ ಸಹಕಾರಿ ಜವಾಬ್ದಾರಿಯಿಂದ, ಈ ಎರಡು ವಿಷಯದಲ್ಲಿ, ಕಾರ್ಯ ನಿರ್ವಹಿಸದೇ ಇದ್ದುದರಿಂದ ನಿಬಂಧಕರಿಗೆ ವರ್ಗಾಯಿಸಿದೆ.

ಮುಂದಿನ ಸಂಚಿಕೆಗೆ........



## ಬಯಲಿನಲ್ಲಿ ಪಯಣದ ಗುರಿ

ಎಂ.ಎನ್.ಅಶ್ವತ್ಥ ನಾರಾಯಣ
ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು ಬೆಂಗಳೂರು

# ಸೌಹಾರ್ದ ಕಾಯಿದೆಯ ಪ್ರಸ್ತುತತೆ...

...ಹಿಂದಿನ ಸಂಚಿಕೆಯಿಂದ

ಸಂಘಗಳು ಸದಸ್ಯರಿಗೆ ಸಾಲ ನೀಡಿದ ಘಳಿಗೆಯಿಂದಲೇ ಬಡ್ಡಿಯು ಮೀಟರಿನಂತೆ ಓಡಲು ಶುರುವಾಗುವುದು ಎಲ್ಲರಿಗೂ ತಿಳಿದೇ ಇದೆ. ಅದೇ ರೀತಿ ಠೇವಣಿದಾರರು ಸಂಘಗಳಲ್ಲಿ ಇಟ್ಟ ಠೇವಣಿ ಹಣದ ಮೇಲೆ ಸಹ ಸಂಘವು ಕೊಡಬೇಕಾದ ಬಡ್ಡಿ ಮೀಟರಿನಂತೆ ಓಡುತ್ತದೆ. ಹಣಕಾಸಿನ ವ್ಯವಹಾರದ ಮೂಲನೀತಿಯೇ ಇದಾಗಿದೆ. ಆದ್ದರಿಂದಲೇ ಸಾಲ ಕೊಟ್ಟ ನಂತರ, ಆ ಹಣಕಾಸಿನ ವರ್ಷದ ಕೊನೆಗೆ ಕೊಟ್ಟ ಸಾಲದ ಮೇಲೆ ಎಷ್ಟು ಬಡ್ಡಿ ಬರಬೇಕಾಗಿದೆ (ಅರ್ಜಿತ ಬಡ್ಡಿ – accrued interest) ಹಾಗೂ ತಂದ ಸಾಲದ ಮೇಲೆ ಎಷ್ಟು ಬಡ್ಡಿ ಕೊಡಬೇಕಾಗಿದೆ ಎಂಬುದನ್ನು ತಮ್ಮ ಲೆಕ್ಕಪತ್ರಗಳಲ್ಲಿ ತೋರಿಸುವುದು ಎಲ್ಲ ಆರ್ಥಿಕ ಸಂಸ್ಥೆಗಳಲ್ಲಿನ ಲೆಕ್ಕಪತ್ರಗಳ ಒಂದು ಪ್ರಮುಖ ಅಂಶವಾಗಿರುತ್ತದೆ. ಆದರೆ ಮೂಲ ಕಾಯಿದೆಯಲ್ಲಿ ಬರುವ ನಿಯಮ 22 ವಿಧಿಸುವುದು ಏನೆಂದರೆ ಸಹಕಾರಿ ಸಂಘಗಳು ತಾವು ಕೊಡಬೇಕಾದ ಬಡ್ಡಿಯನ್ನು ನಷ್ಟದಲ್ಲಿ ತೋರಿಸಬೇಕು; ಆದರೆ ಅರ್ಜಿತವಾಗಿದ್ದರೂ ಆದರೆ ವಸೂಲಾಗಿಲ್ಲದ ಬಡ್ಡಿಯನ್ನು ಆದಾಯದಲ್ಲಿ ತೋರಿಸತಕ್ಕದ್ದಲ್ಲ. ಇತರ ಆರ್ಥಿಕ ಸಂಸ್ಥೆಗಳು ತಾವು ಕೊಡಬೇಕಾದ ಬಡ್ಡಿ ಇತ್ಯಾದಿಗಳನ್ನು ನಷ್ಟದಲ್ಲಿ ತೋರಿಸುವಂತೆ ಬರಬೇಕಾದ ಬಡ್ಡಿ ಮುಂತಾದ ಆದಾಯಗಳನ್ನು ಅವು ಬಂದಿಲ್ಲದೇ ಇದ್ದರೂ ತಮ್ಮ ಆರ್ಥಿಕ ತ:ಖ್ತೆಗಳಲ್ಲಿ ಕಾಣಿಸುತ್ತಾರೆ. ಆರ್ಥಿಕ ತ:ಖ್ತೆಗಳನ್ನು ತಯಾರಿಸುವವರು, ಅರ್ಥಮಾಡಿಕೊಳ್ಳುವವರು, ವಿಶ್ಲೇಷಣೆ ಮಾಡುವವರು ಮುಂತಾದವರಿಗೆ ಇದು ಎಷ್ಟು ದೊಡ್ಡ ವಿಷಯ ಎಂಬುದು ಕೂಡಲೇ ಗೊತ್ತಾಗುತ್ತದೆ. ಆದರೆ ಸೌಹಾರ್ದ ಕಾಯಿದೆಯಲ್ಲಿ ಈ ತರಹದ – ಎಂದರೆ ನಿಯಮ 22ರಲ್ಲಿ ಇರುವ ತರಹದ – ನಿರ್ಬಂಧ ಇಲ್ಲ. ಎಂದರೆ ಸೌಹಾರ್ದ ಕಾಯಿದೆಯಲ್ಲಿನ ಸಹಕಾರಿಗಳು, ಖಾಸಗಿ ಸಂಸ್ಥೆಗಳಂತೆ, ವಸೂಲಾಗಿಲ್ಲದ ಬಡ್ಡಿಯನ್ನು ಸಹ ತಮ್ಮ ಆರ್ಥಿಕ ತ:ಖ್ತೆಗಳಲ್ಲಿ ತೋರಿಸಬಹುದಾಗಿರುತ್ತದೆ. ಇದರ ಪರಿಣಾಮವೇನು? ಮೂಲ ಕಾಯಿದೆಯ ಒಂದು ಸಂಘ ಮತ್ತು ಸೌಹಾರ್ದ ಕಾಯಿದೆಯ ಒಂದು ಸಹಕಾರಿ – ಇವೆರಡಲ್ಲೂ ಒಂದೇ ರೀತಿಯ ಆರ್ಥಿಕ ವ್ಯವಹಾರಗಳಿವೆ ಎಂದಿಟ್ಟುಕೊಳ್ಳೋಣ.ಎಂದರೆ, ಬಂಡವಾಳ, ಸಾಲ ನೀಡಿಕೆ, ಸಾಲ ವಸೂಲಾತಿ ಮುಂತಾದುವೆಲ್ಲವೂ ಒಂದೇ. ಸಾಲ ವಸೂಲಾತಿಯು ಸಹ ಎರಡರಲ್ಲೂ ಶೇ 50 ಅನ್ನು ಮೀರಿಲ್ಲ ಎಂದೂ ಮತ್ತು ಹೂಡಿಕೆಗಳ ಮೇಲಿನ ಬಡ್ಡಿ ಸರಿಯಾಗಿ ಬರುತ್ತಿಲ್ಲ ಎಂದೂ ಇಟ್ಟುಕೊಳ್ಳೋಣ. ಆಗ ಸೌಹಾರ್ದ ಕಾಯಿದೆಯ ಸಹಕಾರಿಯು ಮೂಲ ಕಾಯಿದೆಯ ಸಂಘಕ್ಕಿಂತ ಹೆಚ್ಚು ಉತ್ತಮವಾದ ಆರ್ಥಿಕ ಚಿತ್ರವನ್ನು ತೋರಿಸಬಹುದು ; ಆರ್ಥಿಕವಾಗಿ ಹೆಚ್ಚು ಸುಂದರವಾಗಿ ಕಾಣಬಹುದು.ಇದರಿಂದ ಅದು ಹೆಚ್ಚು ಗ್ರಾಹಕರನ್ನು ಆಕರ್ಷಿಸಬಹುದು. ಮುಕ್ತ ಮಾರುಕಟ್ಟೆಯಲ್ಲಿ ಸ್ಪರ್ಧಿಸಬೇಕಾಗಿರುವಾಗ ಇದು ಎಷ್ಟು ಮುಖ್ಯ ಎಂದು ಬೇರೆ ಹೇಳಬೇಕಾಗಿಲ್ಲ.

ಆದರೆ ಸಾಲಗಳು ವರ್ಷಗಟ್ಟಲೆ ವಸೂಲಾಗದಿದ್ದಲ್ಲಿ, ಅರ್ಜಿತವಾಗಿದ್ದರೂ ವಸೂಲಾಗಿಲ್ಲದ ಬಡ್ಡಿ ಒಂದು ದೊಡ್ಡ ಕ್ಯಾನ್ಸರಿನಂತೆ ಆಗುತ್ತದೆ. ರಾಷ್ಟ್ರೀಕರಣವಾದ ಬ್ಯಾಂಕ್‌ಗಳು ಆಗಾಗ್ಗೆ ಈ ಪರಿಸ್ಥಿತಿಗೆ ಬರುತ್ತಿರುತ್ತವೆ. ಮೇಲೆ ನೋಡಲು ಅವುಗಳ ಆರ್ಥಿಕ ತ:ಖ್ತೆಗಳು ಸುಂದರವಾಗಿ ಕಂಡರೂ ಆ ಬ್ಯಾಂಕ್‌ಗಳು ಒಳಗೇ ಕೊಳೆತವು. ಆದ್ದರಿಂದ ಅವುಗಳ ಮಾಲೀಕತ್ವದ ಹೊಣೆ ಹೊತ್ತಿದ್ದ ಕೇಂದ್ರ ಸರ್ಕಾರ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಸುರಿದು ಅವುಗಳನ್ನು ರಕ್ಷಿಸಬೇಕಾಯಿತು. ಈ ಕೆಲಸಕ್ಕೆ ಮರುಬಂಡವಾಳೀಕರಣ ಎಂಬ ಸುಂದರ ಹೆಸರನ್ನು ಇಡಲಾಯಿತು.1991 ರಲ್ಲಿ ಆರಂಭವಾದ ಈ ಪ್ರಕ್ರಿಯೆ ಇನ್ನೂ ಆಗಾಗ್ಗೆ ನಡೆಯುತ್ತಲೇ ಇದೆ.

ಕೃಷಿ ಸಹಕಾರ ಸಂಸ್ಥೆಗಳು ಸಹ ರಾಷ್ಟ್ರೀಕೃತ ಬ್ಯಾಂಕ್‌ಗಳಂತೆ ಸರ್ಕಾರದ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿರುತ್ತವೆ. ಆದ್ದರಿಂದ ಇವೂ ಕೂಡ ಭಾರತ ಸರ್ಕಾರವನ್ನು ಹಣ ಕೇಳಿದವು. ಆದರೆ ಭಾರತ ಸರ್ಕಾರ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಮಾಲೀಕನೇ ಹೊರತು ಸಹಕಾರಿ ಸಂಘಗಳಿಗೆ ಅಲ್ಲವಲ್ಲ ! ಪ್ರತಿ ಸಹಕಾರ ಸಂಸ್ಥೆಯೂ ಒಂದು ಸ್ವಾಯತ್ತ ಸಂಸ್ಥೆ ಅಲ್ಲವೇ ?! ಸದಸ್ಯರು ತಾನೇ ಅದರ ಮಾಲೀಕರು ! ವರ್ಷಗಟ್ಟಲೆ ಈ ಜಗ್ಗಾಟ ನಡೆದು, ಕಡೆಗೆ ವೈದ್ಯನಾಥನ್ ವರದಿ ಬಂದು ಕೇಂದ್ರ ಸರ್ಕಾರದಿಂದ ಒಂದಿಷ್ಟು ಹಣ ಈಗ ಈ ಸಂಸ್ಥೆಗಳಿಗೆ ಬರುತ್ತಿರುವುದು ಎಲ್ಲರಿಗೂ ತಿಳಿದೇ ಇದೆ.

ಆದ್ದರಿಂದ 1959 ರಲ್ಲಿ ಇದ್ದ ಮೂಲ ಕಾಯಿದೆಗೂ 2011 ರಲ್ಲಿ ಈಗ ಇರುವ ಸೌಹಾರ್ದ ಕಾಯಿದೆಗೂ ಇರುವ ಅತ್ಯಂತ ಪ್ರಮುಖ ವ್ಯತ್ಯಾಸ ಎಂದರೆ ಲೆಕ್ಕಪತ್ರಗಳ ತಯಾರಿಕೆ ಮತ್ತು ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಈ ವ್ಯತ್ಯಾಸವೇ ಎಂದು ನಾನು ತಿಳಿಯುತ್ತೇನೆ. ಏಕೆಂದರೆ ಇದು ಶೇ 100 ರಷ್ಟು ಎಲ್ಲ ಸಂಘಗಳಿಗೂ ––ಸೌಹಾರ್ದ ಸಹಕಾರಿಗಳು ಮತ್ತು ಸಹಕಾರಿ ಸಂಘಗಳು – ಎಲ್ಲವಕ್ಕೂ ಅನ್ವಯಿಸುತ್ತದೆ. ನಾನು ಮೇಲೆ ಪಟ್ಟಿ ಮಾಡಿದ ಹಸ್ತಕ್ಷೇಪದ ಅವಕಾಶಗಳು ಅನ್ವಯವಾಗುವುದು ಬೆರಳೆಣಿಕೆಯಷ್ಟು ಸಂಘಗಳಿಗೆ ಮಾತ್ರ . ಉದಾಹರಣೆಗೆ ಈಗ ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಸುಮಾರು 30 000 ಸಹಕಾರಿ ಸಂಘಗಳಲ್ಲಿ ಆಡಳಿತ ಮಂಡಳಿ ರದ್ದತಿ ಆಗಿರುವುದು ಸುಮಾರು 300 ಸಂಘಗಳಲ್ಲಿ – ಎಂದರೆ

ಮುಂದಿನ ಸಂಚಿಕೆಗೆ........

ಕೃಷಿ ಸಹಕಾರ ಸಂಸ್ಥೆಗಳು ಸಹ ರಾಷ್ಟ್ರೀಕೃತ ಬ್ಯಾಂಕ್‌ಗಳಂತೆ ಸರ್ಕಾರದ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿರುತ್ತವೆ. ಆದ್ದರಿಂದ ಇವೂ ಕೂಡ ಭಾರತ ಸರ್ಕಾರವನ್ನು ಹಣ ಕೇಳಿದವು. ಆದರೆ ಭಾರತ ಸರ್ಕಾರ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಮಾಲೀಕನೇ ಹೊರತು ಸಹಕಾರಿ ಸಂಘಗಳಿಗೆ ಅಲ್ಲವಲ್ಲ ! ಪ್ರತಿ ಸಹಕಾರ ಸಂಸ್ಥೆಯೂ ಒಂದು ಸ್ವಾಯತ್ತ ಸಂಸ್ಥೆ ಅಲ್ಲವೇ ?! ಸದಸ್ಯರು ತಾನೇ ಅದರ ಮಾಲೀಕರು ! ವರ್ಷಗಟ್ಟಲೆ ಈ ಜಗ್ಗಾಟ ನಡೆದು, ಕಡೆಗೆ ವೈದ್ಯನಾಥನ್ ವರದಿ ಬಂದು ಕೇಂದ್ರ ಸರ್ಕಾರದಿಂದ ಒಂದಿಷ್ಟು ಹಣ ಈಗ ಈ ಸಂಸ್ಥೆಗಳಿಗೆ ಬರುತ್ತಿರುವುದು ಎಲ್ಲರಿಗೂ ತಿಳಿದೇ ಇದೆ.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ದಶಮಾನೋತ್ಸವ

# ಕೇಂದ್ರ ಸರಕಾರವು ಸಹಕಾರಿ ಸಂಘಗಳಿಗೆ ಶೇ.33 ತೆರಿಗೆ ವಿಧಿಸಿರುವುದು ದುರದೃಷ್ಟಕರ : ಸಚಿವೆ ಶೋಭಾ ಕರಂದ್ಲಾಜೆ



ಕೇಂದ್ರ ಸರಕಾರವು ಸಹಕಾರಿ ಸಂಘಗಳಿಗೆ ಶೇ.33 ತೆರಿಗೆ ವಿಧಿಸಿರುವುದು ದುರದೃಷ್ಟಕರ ಎಂದು ರಾಜ್ಯ ಇಂಧನ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ. ಅವರು ದಿನಾಂಕ 04–09–2011 ರಂದು ಪುತ್ತೂರಿನ ದುಗ್ಗಮ್ಮ ದೇರಣ್ಣ ಸಭಾಂಗಣದಲ್ಲಿ ನಡೆದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರೈತರ ಹಿತದೃಷ್ಟಿಯಿಂದ ಕೇಂದ್ರ ಸರಕಾರವು ಹಿಂದಿನ ಸ್ಥಿತಿಯಂತೆಯೇ ತೆರಿಗೆ ಮುಂದುವರಿಸಿ ರೈತರಿಗೆ ಸಹಕರಿಸಬೇಕು. ಇಲ್ಲದಿದ್ದಲ್ಲಿ ಇದನ್ನು ತಡೆಯಲು ರೈತರು ಒಟ್ಟಾಗಿ ಹೋರಾಟ ನಡೆಸುವ ಮೂಲಕ ಒತ್ತಡ ತರಬೇಕು ಎಂದು ಅವರು ನುಡಿದರು. ಸರಕಾರದ ವತಿಯಿಂದಲೂ ಈ ಬಗ್ಗೆ ಕೇಂದ್ರಕ್ಕೆ ಪತ್ರ ಬರೆಯುವ ಕೆಲಸ ಮಾಡುವುದಾಗಿ ಹೇಳಿದರು. ಜನರಿಗೆ ಉಪಯೋಗವಾಗುವ ರೀತಿಯಲ್ಲಿ ಸಹಕಾರಿ ಕಾಯ್ದೆ ತಿದ್ದುಪಡಿಗೆ ಸರಕಾರ ಬದ್ಧವಾಗಿದೆ ಎಂದರು. ಜನರು ಚರ್ಚಿಸಿ ಈ ಬಗ್ಗೆ ಹೇಳಿದರೆ ಮುಂದಿನ ಅಧಿವೇಶನದಲ್ಲಿ ಕಾಯಿದೆ ತಿದ್ದುಪಡಿ ವಿಷಯಕ್ಕೆ ಆದ್ಯತೆ ನೀಡಲಾಗುವುದು ಎಂದು ಸಚಿವರು ಹೇಳಿದರು.

ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ವಿಧಾನಸಭೆ ಉಪಸಭಾಪತಿಗಳಾದ ಶ್ರೀ ಯೋಗೀಶ್ ಭಟ್ ರವರು ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ ಹೊಸ ಆಯಾಮಗಳನ್ನು ಜೋಡಿಸಿಕೊಂಡಾಗ ಇನ್ನು ಹೆಚ್ಚಿನ ಯಶಸ್ಸು ಕಾಣಲು ಸಾಧ್ಯ ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದ ಅಧ್ಯಕ್ಷ ಶ್ರೀ ಜಿ.ಟಿ. ದೇವೇಗೌಡರು ಮಾತನಾಡಿ, ಯಾವುದೇ ಕ್ಷೇತ್ರದಲ್ಲಿ ಅಧಿಕಾರದಲ್ಲಿರುವವರು ಪ್ರಾಮಾಣಿಕವಾಗಿ ತಮ್ಮ ಸೇವೆಯನ್ನು ಮಾಡಿದಾಗ ಮಾತ್ರ ಭ್ರಷ್ಟಾಚಾರ ನಿರ್ಮೂಲನೆಗೆ ಸಾಧ್ಯ ಎಂದು ಅಭಿಪ್ರಾಯಿಸಿದರು.

ಸಹಕಾರಿ ಕ್ಷೇತ್ರದಲ್ಲಿ ಯುವಕರು ಹೆಚ್ಚೆಚ್ಚು ತೊಡಗಿಸಿಕೊಂಡು ಅದನ್ನು ಬೆಳೆಸಲು ಮುಂದಾಗಬೇಕು ಎಂದು ಕರ್ನಾಟಕ ಸಹಕಾರ ಭಾರತಿ ಅಧ್ಯಕ್ಷ ಶ್ರೀ ನರಸಿಂಹ ನಾಯಕ್ ನುಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಶ್ರೀ ಅಣ್ಣಾವಿನಯಚಂದ್ರರವರು ಮಾತನಾಡಿದರು.

ಹಿರಿಯ ಸಹಕಾರಿ ಧುರೀಣ ಶ್ರೀಯುತ ಪೆರಾಜೆ ಶ್ರೀನಿವಾಸರಾಯರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ವಿಧಾನ ಪರಿಷತ್ ಸದಸ್ಯ ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಸರಸ್ವತಿ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಶ್ರೀ ದಿವಾಕರ ರೈ ಉಪಸ್ಥಿತರಿದ್ದರು.

ಶ್ರೀ ಹರೀಶ್ ಪ್ರಾರ್ಥಿಸಿದರು, ಸರಸ್ವತಿ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್, ಸತೀಶ್ಚಂದ್ರ ಸ್ವಾಗತಿಸಿದರು. ಉಪಾಧ್ಯಕ್ಷರಾದ ಶ್ರೀ ವಿನಯ ಕುಮಾರ್ ಕಂದಡ್ಕ ವಂದಿಸಿದರು. ಶ್ರೀ ಗಣೇಶ್ ಮತ್ತು ಶ್ರೀಮತಿ ಭವಾನಿ ಸುದರ್ಶನ್ ಕಾರ್ಯಕ್ರಮ ನಿರೂಪಿಸಿದರು.ಸಭಾ ಕಾರ್ಯಕ್ರಮದ ಬಳಿಕ ಮಂಗಳೂರಿನ ಶ್ರೀ ಸನಾತನ ನಾಟ್ಯಾಲಯದವರಿಂದ "ದೇಶ ದೇವೋಭವ" ಗೀತ, ನೃತ್ಯ, ತರಂಗಿಣಿ ಕಾರ್ಯಕ್ರಮ ನಡೆಯಿತು.

# ಸೆವೆನ್ ಹಿಲ್ಸ್ ವಿವಿದೋದ್ಧೇಶ ಸೌಹಾರ್ದ ಸಹಕಾರಿಯ ಉದ್ಘಾಟನೆ

ಕೋಲಾರ ಜಿಲ್ಲೆಯ ಮಾಲೂರು ಟೌನನಲ್ಲಿ ದಿನಾಂಕ 11–8–2011 ರಂದು ಸೆವೆನ್ ಹಿಲ್ಸ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರಿ ಎಸ್.ಆರ್.ಸತೀಶಚಂದ್ರರವರು ಉದ್ಘಾಟಿಸಿ ಶುಭ ಹಾರೈಸಿ ಸಹಕಾರ ಕ್ಷೇತ್ರದ ಮೂಲಕ ಸಮಾಜದ ಎಲ್ಲ ಜನರಿಗೆ ಸೇವೆಸಲ್ಲಿಸಲು ಅವರ ಆರ್ಥಿಕ ಅಭಿವೃದ್ದಿಗೆ ನೆರವಾಗಲೂ ಅವಕಾಸವಿದೆ ಎಂದು ತಿಳಿಸುತ್ತ ಸಹಕಾರಿ ಕ್ಷೇತ್ರದ ಇದುವರೆಗಿನ ಸಾಧನೆಗಳನ್ನು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೆಶಕ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳು ಕರ್ನಾಟಕದ ಸಮಗ್ರ ಸಹಕಾರಿ ಕ್ಷೇತ್ರಕ್ಕೆ ಹೆಚ್ಚು ಬಲತಂದು ಕೊಟ್ಟಿದೆ. ಈ ಕ್ಷೇತ್ರದ ಮೂಲಕ ಸಾಮಾಜಿಕ ಹಾಗೂ ಆರ್ಥಿಕವಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.



ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರರವರು ಸಹಕಾರಿ ಕ್ಷೇತ್ರದ ಪ್ರಗತಿ ಬೆಳೆದು ಬಂದ ದಾರಿ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ಸಹಕಾರಿಯ ಮುಖ್ಯ ಪ್ರವರ್ತಕರಾಗಿದ್ದ ಶ್ರೀ ಜಿ. ನಾರಾಯಣಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾಜ ಸೇವಕ ಶ್ರೀ ಸಿ.ಆರ್.ನರಸಿಂಹಮೂರ್ತಿ ಕೆ.ಎಮ್.ಎಫ್ ನಿರ್ದೆಸಕ ಡಾ. ಎ.ವಿ.ಪ್ರಸನ್ನ ಶ್ರೀ ನಾಗರಾಜರೆಡ್ಡಿ ಅನೇಕ ಸಹಕಾರಿಗಳು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

### ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 10 ನೇಯ ಸಾಮಾನ್ಯ ಸಭೆಯಲ್ಲಿ

# "ಸಹಕಾರ ರತ್ನ" ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 10 ನೇಯ ಸಾಮಾನ್ಯ ಸಭೆಯಲ್ಲಿ ಕಳೆದ ಸಾಲಿನ ಸಹಕಾರ ಸಪ್ತಾಹದ ಅವಧಿಯಲ್ಲಿ ಕರ್ನಾಟಕಸರಕಾರದ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ರಾಜ್ಯದ ಸೌಹಾರ್ದ ಸಹಕಾರಿಗಳಾದ ಶ್ರೀ ಆರ್.ಎಮ್. ಮಂಜುನಾಥಗೌಡ (ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು) ಕೊಡಚಾದ್ರಿ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಇದರ ಅಧ್ಯಕ್ಷರು, ಶ್ರೀ ಅಣ್ಣಾಸಾಹೇಬ ಜೊಲ್ಲೆ ಸಂಸ್ಥಾಪಕ ಅಧ್ಯಕ್ಷರು ಶ್ರೀ ಬೀರೇಶ್ವರ ಸೌಹಾರ್ದ ಸಹಕಾರಿ ನಿ., ಎಕ್ಸಂಬ ಬೆಳಗಾವಿ ಜಿಲ್ಲೆ, ಶ್ರೀ ಗುರುನಾಥ ಜ್ಯಾಂತಿಕರ ಅಧ್ಯಕ್ಷರು ಶ್ರೀ ಕಲ್ಯಾಣ ಸೌಹಾರ್ದ ಪತ್ತಿನ ಸಹಕಾರಿ ನಿ., ಬೀದರ ಹಾಗೂ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಇವರುಗಳನ್ನು ಅಭಿನಂದನೆ ಸಲ್ಲಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀ ಆರ್‌ಎಮ್. ಮಂಜುನಾಥಗೌಡರು ಹಾಗೂ ಶ್ರೀ ಅಣ್ಣಾ ಸಾಹೇಬ ಜೊಲ್ಲೆಯವರು ಕಾರಣಾಂತರಗಳಿಂದ ಬಾರದೆ ಇದ್ದ ಪ್ರಯುಕ್ತ ಶ್ರೀ ಗುರುನಾಥ ಜ್ಯಾಂತಿಕರರವರನ್ನು ಮಾತ್ರ ಸನ್ಮಾನಿಸಲಾಯಿತು.

ನಂತರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್‌ವರು ಸಾಮಾನ್ಯ ಸಭೆಯ ನೋಟೀಸನ್ನು ಓದಿದರು. ವಿಷಯವಾರು ಪಟ್ಟಿಯಂತೆ ಸವಿಸ್ತಾರ ಚರ್ಚೆಗಳು ನಡೆದು ನಿರ್ಣಯಗಳನ್ನು ಅಂಗೀಕರಿಸಲಾಯಿತು.ವ್ಯವಸ್ಥಾಪಕ ನಿರ್ದೇಶಕರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು. ನಂತರ ಕು. ಸಹನಾ ಮತ್ತು ವೃಂದದವರಿಂದ ಸುಗಮ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

## ಮುಖ್ಯಮಂತ್ರಿಯವರಿಗೆ ಅಭಿನಂದನೆ



ರಾಜ್ಯಕ್ಕೆ ಸಹಕಾರಿ ಕ್ಷೇತ್ರದ ಬಗ್ಗೆ ಹೆಚ್ಚಿನ ಅನುಭವವಿರುವ ಮುಖ್ಯಮಂತ್ರಿ ದೊರಕಿದ್ದಾರೆ. ಅವರ ಈ ಅವಧಿಯಲ್ಲಿ ಸಹಕಾರ ಕ್ಷೇತ್ರ ಇನ್ನಷ್ಟು ಪ್ರಗತಿಯನ್ನು ಸಾಧಿಸಲಿ ಎಂದು ತಿಳಿಸಿ ಸಂಯುಕ್ತ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಎಲ್ಲ ಪ್ರತಿನಿಧಿಗಳ ಪರವಾಗಿ ನೂತನ ಮುಖ್ಯಮಂತ್ರಿ ಶ್ರೀಯುತ ಡಿ. ವಿ. ಸದಾನಂದ ಗೌಡ ರವರನ್ನು ಅಭಿನಂದಿಸಿದರು.

## ಸಹಕಾರಿಗಳಿಂದ "ಆಧುನಿಕ ತಂತ್ರಜ್ಞಾನದ ಕ್ರಾಂತಿ"ಗೆ ಚಾಲನೆಯಾಗ ಬೇಕಿದೆ – ಎಸ್.ಆರ್. ಸತೀಶಚಂದ್ರ

ಎಂ.ಬಿ.ಎ ಪದವಿ ಪ್ರದಾನ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್.ಸತೀಶಚಂದ್ರರವರು ಅಧ್ಯಕ್ಷ ಭಾಷಣ ಮಾಡುತ್ತ ಸಹಕಾರಿ ಕ್ಷೇತ್ರ ಈ ದೇಶದ ಅಭಿವೃದ್ಧಿಗಾಗಿ ಗಣನೀಯ ಕೊಡುಗೆ ನೀಡಿದೆ. ಸಹಕಾರಿ ಕ್ಷೇತ್ರದ ಮೂಲಕ "ಹಸಿರು ಕ್ರಾಂತಿ"ಯಾಗಿ ದೇಶ ಆಹಾರ ಉತ್ಪಾದನೆಯಲ್ಲಿ ಸ್ವಾವಂಬನೆ ಸಾಧಿಸಲು ಸಾಧ್ಯವಾಗಿದೆ.

"ಶ್ವೇತ ಕ್ರಾಂತಿ" ಯಾಗಿ ಹಾಲಿನ ಹೊಳೆಯನ್ನೆ ಹರಿಸಿರುವ ಸಹಕಾರಿ ಕ್ಷೇತ್ರ ರೈತ ಆರ್ಥಿಕ ಅಭಿವೃದ್ಧಿ ಸಾಧಿಸಲು ಮಹತ್ತರ ಕೊಡುಗೆ ನೀಡಿದೆ. ಹೀಗೆ ಇನ್ನೂ ಅನೇಕ ಕ್ಷೇತ್ರಗಳನ್ನು ಆವರಿಸಿರುವ ಈ ಸಹಕಾರಿ ಕ್ಷೇತ್ರ ದೇಶದ ಅರ್ಥ ವ್ಯವಸ್ಥೆಯಲ್ಲಿ ಮಹತ್ತರ ಕೊಡುಗೆ ನೀಡುತ್ತಿದೆ.

ಈಗ ಎಲ್ಲಕ್ಕಿಂತಲೂ ಮೇಲಾಗಿ ಆಧುನಿಕ ತಂತ್ರಜ್ಞಾನದ ಅವಶ್ಯಕತೆ ಇದೆ. ಯಾವುದರಲ್ಲೂ ಸಹಕಾರ ಕ್ಷೇತ್ರ ಹಿಂದೆ ಬೀಳಬಾರದೆಂದು ಇಂತಹ ಕೋರ್ಸಗಳನ್ನು ಪ್ರಾರಂಭಿಸಲಾಗಿದೆ. ಯುವಜನರಿಗೆ ಈ ಬಗ್ಗೆ ಜ್ಞಾನ ನೀಡುವ ಅವಶ್ಯಕತೆ ಹೆಚ್ಚಾಗಿದೆ ಎಂದು ತಿಳಿಸಿ ಸಹಕಾರಿ ಕ್ಷೇತ್ರದಲ್ಲಿ ಹೊಸ ಹೊಸ ಪ್ರಯೋಗಗಳಿಗೆ ಸಾಕಷ್ಟು ಅವಕಾಶಗಳಿವೆ.

ಈ ನಿಟ್ಟಿನಲ್ಲಿ ಸಹಕಾರಿಗಳು ಪ್ರಯತ್ನಿಸಬೇಕು





**ಸನ್ಮಾನ :** ಉನ್ನತ ಶಿಕ್ಷಣ ಸಚಿವರಾದ ಡಾ.ವಿ.ಎಸ್.ಆಚಾರ್ಯ ಹಾಗೂ ವಿಧಾನ ಪರಿಷತ ಸದಸ್ಯ ಶ್ರೀ ಗಣೇಶ ಕಾರ್ಣಿಕ ರವರನ್ನು ಸಂಯುಕ್ತ ಸಹಕಾರಿಯ ವತಿಯಿಂದ ಶಾಲು ಹೊದಿಸಿ ಹಾರ ಹಾಕಿ ಸ್ಮರಣಿಕೆ ನೀಡಿ ಫಲತಾಂಬೂಲ ನೀಡಿ ಸನ್ಮಾನಿಸಲಾಯಿತು.



# ಪತ್ತಿನ ಸಹಕಾರಿ ಸಂಘಗಳಿಗೆ ಆದಾಯ ತೆರಿಗೆ ಆಪತ್ತು.

**ಎಚ್. ಶಿವಕುಮಾರ್**
ಚಾರ್ಟೆಡ್ ಅಕೌಂಟೆಂಟ್
shivakumar.h@icai.org

ಆದಾಯ ತೆರಿಗೆ ಕಲಂ 80 ಪಿ ಪ್ರಕಾರ ಸಹಕಾರಿ ಸಂಘಗಳ ಕಾಯ್ದೆ ಅಡಿ ನೊಂದಣಿಯಾಗಿ ವ್ಯವಹರಿಸುತ್ತಿರುವ ಎಲ್ಲಾ ಪತ್ತಿನ ಸಹಕಾರಿ ಸಂಘ-ಸಂಸ್ಥೆಗಳು ತಮ್ಮ ಉದ್ದರಿ ವ್ಯವಹಾರಗಳ ಮೇಲೆ ಬರುವ ಲಾಭಕ್ಕೆ ಆದಾಯ ತೆರಿಗೆಯಿಂದ ವಿನಾಯಿತಿ ಪಡೆಯುವ ಪದ್ಧತಿ ಮೊದಲಿನಿಂದಲೂ ಜಾರಿಯಲ್ಲಿದೆ. ಸೌಹಾರ್ದ ಪತ್ತಿನ ಸಹಕಾರಿ ಸಂಘಗಳು ಸಹ ಇದೇ ಮಾದರಿಯಲ್ಲಿ ಆದಾಯ ತೆರಿಗೆ ವಿನಾಯತಿಗೆ ಅರ್ಹವಾಗುತ್ತವೆ. ಆದಾಯ ತೆರಿಗೆ ಕಲಂ 80 ಪಿ ಪ್ರಕಾರ ಬ್ಯಾಂಕಿಂಗ್ ವ್ಯವಹಾರಗಳು ಎಂದರೆ, ಸದಸ್ಯರಿಂದ ಠೇವಣಿ ಸ್ವೀಕರಿಸುವ ಮತ್ತು ಸದಸ್ಯರಿಗೆ ಸಾಲ ನೀಡುವ ವ್ಯವಹಾರಗಳನ್ನು ನಡೆಸುವ ಸಹಕಾರಿ ಸಂಘಗಳು ಪತ್ತಿನ ಸಹಕಾರ ಸಂಘಗಳೆಂದು ವರ್ಗೀಕರಣಗೊಳ್ಳುತ್ತವೆ. ಪತ್ತಿನ ಸಹಕಾರ ಸಂಘಗಳು ತಮ್ಮ ಬ್ಯಾಂಕಿಂಗ್ ವ್ಯವಹಾರಗಳ ಮೂಲಕ ಗಳಿಸುವ ಮೂಲಕ ಲಾಭದ ಹಣಕ್ಕೆ ಆದಾಯ ತೆರಿಗೆ ಇರುವುದಿಲ್ಲ ಎಂದು 80 ಪಿ(2) (ಎ) (ಐ) ಹೇಳುತ್ತವೆ.

> **ಪತ್ತಿನ ಸಹಕಾರಿ ಸಂಘಗಳು ಸಹಕಾರಿ ಬ್ಯಾಂಕುಗಳಲ್ಲ ಎಂಬ ವಾದವನ್ನು ಆದಾಯ ತೆರಿಗೆ ಒಪ್ಪುತ್ತಿಲ್ಲ. ಈ ದಿಸೆಯಲ್ಲಿ ಇಲಾಖೆಯಲ್ಲಿ ಮನವಿ ಮತ್ತು ಮೇಲ್ಮನವಿಗಳು ಇತ್ಯಾರ್ಥವಾಗದೆ ಉಳಿದಿವೆ. ಪತ್ತಿನ ಸಹಕಾರಿ ಸಂಘಗಳು ತೆರಿಗೆಯನ್ನು ಕಟ್ಟದೆ ವಿನಾಯಿತಿ ಕೋರುವುದು ಮತ್ತು ಆದಾಯ ತೆರಿಗೆ ಇಲಾಖೆಯು ತೆರಿಗೆಯನ್ನು ವಿಧಿಸುವುದು ತೆರಿಗೆ ವ್ಯಾಜ್ಯಗಳ ಸೃಷ್ಟಿಗೆ ಕಾರಣವಾಗಿದೆ.**

ಸದರಿ ವಸ್ತು ಸ್ಥಿತಿಯು ತೀರ ಇತ್ತೀಚಿನ ವರೆಗೆ ಯಾವುದೇ ಗೊಂದಲಗಳಿಲ್ಲದೇ ನಡೆದುಕೊಂಡೆ ಬಂತು. ಆದರೆ, ಇದಕ್ಕೆ ಆಪತ್ತು ಬಂದೊದಗಿದ್ದು 2006-07 ರಿಂದ. 2006-07 ನೇ ಸಾಲಿನಿಂದ ಜಾರಿಗೆ ಬರುವಂತೆ ಕೇಂದ್ರ ಸರ್ಕಾರ 80 ಪಿ ಕಾಯ್ದೆಗೆ ತಂದ ತಿದ್ದುಪಡಿಯೇ ಬಹಳ ದೊಡ್ಡ ಗೊಂದಲಕ್ಕೆ ಕಾರಣವಾಗಿದೆ. ಈ ತಿದ್ದುಪಡಿಯ ಪ್ರಕಾರ ಸಹಕಾರಿ ಬ್ಯಾಂಕುಗಳು ಆದಾಯ ತೆರಿಗೆ ವಿನಾಯಿತಿಗೆ ಅರ್ಹವಾಗುವುದಿಲ್ಲ. ಸಹಕಾರಿ ಬ್ಯಾಂಕುಗಳು ಎಲ್ಲ ವರ್ಗದ ತೆರಿಗೆದಾರರಂತೆ, ಖಾಸಗಿ ಕಂಪನಿಗಳು ಹೇಗೆ ಆದಾಯ ತೆರಿಗೆಯನ್ನು ಭರಿಸುತ್ತಿವೆಯೋ ಅದೇ ರೀತಿಯಲ್ಲಿ ಆದಾಯ ತೆರಿಗೆಯನ್ನು ಕಟ್ಟಬೇಕಾಗುತ್ತದೆ ಎಂಬುದು ತಿದ್ದುಪಡಿಯ ಉದ್ದೇಶ. ಅದರಂತೆ ಎಲ್ಲಾ ಸಹಕಾರಿ ಬ್ಯಾಂಕುಗಳು ತಮ್ಮ ಲಾಭದ ಹಣದ ಮೇಲೆ ಶೇ.30ರ ಆದಾಯ ತೆರಿಗೆಯನ್ನು 2006-07 ನೇ ಸಾಲಿನಿಂದ ತೆರುತ್ತಾ ಬಂದಿವೆ.




ಸಹಕಾರಿ ಬ್ಯಾಂಕುಗಳು ಭಾರತೀಯ ರಿಸರ್ವ ಬ್ಯಾಂಕಿನ ನಿಯಂತ್ರಣದಲ್ಲಿದ್ದು ತಮ್ಮ ಬ್ಯಾಂಕಿಂಗ್ ವ್ಯವಹಾರಗಳನ್ನು ಭಾರತೀಯ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಅಡಿ ನಡೆಸುತ್ತವೆ. ಆಗಾಗ್ಯೂ ಸಹಕಾರಿ ಬ್ಯಾಂಕುಗಳು ಆದಾಯ ತೆರಿಗೆ ಕಟ್ಟುವುದು ಸಹಕಾರಿಯ ಮೂಲಭೂತ ಸಿದ್ಧಾಂತದ ತತ್ವಗಳಿಗೆ ಅಪಚಾರ ಎಸಗಿದಂತಾಗುತ್ತದೆ ಎಂಬ ಎಲ್ಲ ತರಹದ ಟೀಕೆ, ಪ್ರತಿರೋಧದ ನಡುವೆಯು ಸಹಕಾರಿ ಬ್ಯಾಂಕುಗಳಿಗೆ ಸರಕಾರ ತೆರಿಗೆ ವಿಧಿಸುತ್ತಲೇ ಬಂದಿದೆ.

ಸಮಸ್ಯೆ ಉದ್ಭವವಾಗಿದ್ದು ಪತ್ತಿನ ಸಹಕಾರ ಸಂಘಗಳ ವಿಷಯದಲ್ಲಿ. ಸಹಕಾರಿ ಬ್ಯಾಂಕುಗಳು ತಮ್ಮ ಬ್ಯಾಂಕಿಂಗ್ ವ್ಯವಹಾರದ ಲಾಭದ ಮೇಲೆ ಶೇ.30 ರ ಆದಾಯ ತೆರಿಗೆ ಕಟ್ಟುತ್ತಿರಬೇಕಾದರೆ, ಪತ್ತಿನ ಸಹಕಾರಿ ಸಂಘಗಳು ಹೇಗೆ ಆದಾಯ ತೆರಿಗೆಯಿಂದ ವಿನಾಯಿತಿಗೊಳಗಾಗುತ್ತವೆ ಎಂಬ ಪ್ರಶ್ನೆ ಎದುರಾಗಿದೆ. ಮೂಲ ಭೂತವಾಗಿ ಸಹಕಾರಿ ಬ್ಯಾಂಕು ಆಗಲಿ, ಪತ್ತಿನ ಸಹಕಾರಿ ಸಂಘವಾಗಲಿ, ಅವೆರಡೂ ಮಾಡುತ್ತಿರುವುದು ಠೇವಣಿ ಸ್ವೀಕರಿಸುವ, ಸಾಲ ನೀಡುವ ಬ್ಯಾಂಕಿಂಗ್ ಕೆಲಸವನ್ನೇ. ಹಾಗಾಗಿ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ಆದಾಯ ತೆರಿಗೆ ವಿಧಿಸಿ, ಅದೇ ತರಹದ ಬ್ಯಾಂಕಿಂಗ್ ವ್ಯವಹಾರ ನಡೆಸುವ ಪತ್ತಿನ ಸಹಕಾರ ಸಂಘಗಳಿಗೆ ವಿನಾಯಿತಿ ನೀಡುವುದು ಎಷ್ಟು ಸಮಂಜಸ ಎಂಬ ತರ್ಕ ಈಗ ಆದಾಯ ತೆರಿಗೆ ಇಲಾಖೆಯಲ್ಲಿ ನಡೆಯುತ್ತಿದೆ. ಪತ್ತಿನ ಸಹಕಾರ ಸಂಘಗಳು ತಮ್ಮ ಲಾಭದ ಹಣದ ಮೇಲೆ 80 ಪಿ ಪ್ರಕಾರ ಆದಾಯ ತೆರಿಗೆ ವಿನಾಯಿತಿ ಕೋರಿ ಸಲ್ಲಿಸುತ್ತಿರುವ ರಿಟರ್ನ್‌ಗಳನ್ನು ತೆರಿಗೆ ಇಲಾಖೆ ತಿರಸ್ಕರಿಸಿ ತೆರಿಗೆಯನ್ನು ವಿಧಿಸುತ್ತಿರುವ ಪ್ರಕರಣಗಳು ಅಲ್ಲಲ್ಲಿ ಕಂಡು ಬರುತ್ತಿವೆ.

ಪತ್ತಿನ ಸಹಕಾರಿ ಸಂಘಗಳು ಸಹಕಾರಿ ಬ್ಯಾಂಕುಗಳಲ್ಲ ಎಂಬ ವಾದವನ್ನು ಆದಾಯ ತೆರಿಗೆ ಒಪ್ಪುತ್ತಿಲ್ಲ. ಈ ದಿಸೆಯಲ್ಲಿ ಇಲಾಖೆಯಲ್ಲಿ ಮನವಿ ಮತ್ತು ಮೇಲ್ಮನವಿಗಳು ಇತ್ಯಾರ್ಥವಾಗದೆ ಉಳಿದಿವೆ. ಪತ್ತಿನ ಸಹಕಾರಿ ಸಂಘಗಳು ತೆರಿಗೆಯನ್ನು ಕಟ್ಟದೆ ವಿನಾಯಿತಿ ಕೋರುವುದು ಮತ್ತು ಆದಾಯ ತೆರಿಗೆ ಇಲಾಖೆಯು ತೆರಿಗೆಯನ್ನು ವಿಧಿಸುವುದು ತೆರಿಗೆ ವ್ಯಾಜ್ಯಗಳ ಸೃಷ್ಟಿಗೆ ಕಾರಣವಾಗಿದೆ. ಬರಿ ತೆರಿಗೆ ಬಾಕಿ ಅಲ್ಲದೆ ಬಾಕಿ ತೆರಿಗೆಯ ಮೇಲೆ ಶೇ.24ರ ಬಡ್ಡಿಯೂ ಕೂಡ ಸೇರಿಸಲ್ಪಟ್ಟು ಭಾರಿ ಮೊತ್ತದ ತೆರಿಗೆ ಹೊರೆ ಪತ್ತಿನ ಸಹಕಾರ ಸಂಘಗಳ ಮೇಲೆ ತೂಗಾಡುತ್ತಿರುವ ಪರಿಸ್ಥಿತಿ ಬಂದೊದಗಿದೆ. ಆದಾಯ ತೆರಿಗೆಯಲ್ಲದೆ ಅದರ ಮೇಲಿನ ಅಗಾಧವಾದ ಬಡ್ಡಿಯನ್ನೂ ಸಹ ಪತ್ತಿನ ಸಹಕಾರ ಸಂಘಗಳು ತೆರಬೇಕಾದ ಅನಿವಾರ್ಯತೆ ಉಂಟಾದಲ್ಲಿ ಅನೇಕ ಪತ್ತಿನ ಸಹಕಾರ ಸಂಘಗಳು ಲಾಭಾಂಶದ ಕೊರತೆಯಿಂದ ಸಂಪೂರ್ಣವಾಗಿ ಮುಚ್ಚಿಹೋಗುವ ಅಪಾಯವಿದೆ.

ಆದ್ದರಿಂದ ಎಲ್ಲ ಪತ್ತಿನ ಸಹಾರ ಸಂಘಗಳು ಒಗ್ಗೂಡಿ ತಾವು ಸಹಕಾರಿ ಬ್ಯಾಂಕುಗಳಲ್ಲ ಮತ್ತು ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತಹ ತೆರಿಗೆ ಸಹಕಾರಿ ಸಂಘಗಳಿಗೆ ಅನ್ವಯಿಸುವುದು ಸಮಂಜಸವಲ್ಲ ಎಂದು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಿದೆ. ಈ ನಿಟ್ಟಿನಲ್ಲಿ ಕೇಂದ್ರ ಆದಾಯ ತೆರಿಗೆ ಮಂಡಳಿಯಿಂದ ಒಂದು ಅಧಿ ಸೂಚನೆಯನ್ನು ಹೊರಡಿಸುವ ಮಟ್ಟಿಗೆ ಪ್ರಯತ್ನಗಳಾಗಬೇಕಿದೆ. ಅಂತಹ ಅಧಿಸೂಚನೆಯೇನಾದರು ಹೊರ ಬಂದಲ್ಲಿ ಪತ್ತಿನ ಸಹಕಾರ ಸಂಘಗಳು ತೆರಿಗೆ ವಿನಾಯಿತಿಯನ್ನು ಪಡೆಯಲು ಅಡ್ಡಿ, ಆತಂಕ, ಆಪತ್ತುಗಳು ಇರುವುದಿಲ್ಲ. ■

# ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟೀಸ್ ಅಸೋಸಿಯೇಶನ್ ನೇತೃತ್ವದಲ್ಲಿ "ಕೇಂದ್ರ ಸರಕಾರದ ನೇರ ತೆರಿಗೆ ಪದ್ಧತಿ" ಕಾರ್ಯಾಗಾರ

ಕೇಂದ್ರ ಸರಕಾರ 2012 ಏಪ್ರಿಲ್ ನಿಂದ ಜಾರಿಗೆ ತರಲು ಉದ್ದೇಶಿಸಿರುವ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಮಾರಕ ವಾಗಬಹುದಾದ "ನೇರ ತೆರಿಗೆ ಪದ್ಧತಿ" ಕುರಿತಾದ ಕಾರ್ಯಕ್ರಮವನ್ನು ಬೆಂಗಳೂರಿನ ಟೌನ್‌ಹಾಲ್‌ನಲ್ಲಿ 25–8–2011 ರಂದು ಸಹಕಾರಿ ಮಹಾ ಮಂಡಳದ ಅಧ್ಯಕ್ಷರೂ, ಮಾಜಿ ಸಹಕಾರ ಸಚಿವರೂ ಆದ ಶ್ರೀ ಜಿ.ಟಿ.ದೇವೆಗೌಡರವರು ಉದ್ಘಾಟಿಸಿ ಈ ದೇಶದ ಅರ್ಥ ವ್ಯವಸ್ಥೆಗೆ ಅತ್ಯಂತ ಮಹತ್ವದ ಕೊಡುಗೆ ನೀಡುತ್ತಿರುವ, ಶ್ರೀಸಾಮಾನ್ಯರ, ಆರ್ಥಿಕವಾಗಿ ಹಿಂದುಳಿದವರ ಅಭಿವೃದ್ಧಿಯನ್ನೆ ಮುಖ್ಯ ಕಾಯಕವನ್ನಾಗಿಸಿಕೊಂಡಿರುವ ಸಹಕಾರ ಕ್ಷೇತ್ರವನ್ನು ನೇರ ತೆರಿಗೆ ವ್ಯಾಪ್ತಿಗೆ ಒಳಪಡಿಸಬೇಕೆಂಬ ಕೇಂದ್ರ ಸರಕಾರ ಧೋರಣೆ ಹಾಲಿನ ಬಟ್ಟಲಿನಲ್ಲಿ ವಿಷಬೆರೆಸಿದಂತಾಗಿದೆ. ಈ ಕ್ಷೇತ್ರ ಕ್ಕೆ ಇದೊಂದು ದೊಡ್ಡ ಅನ್ಯಾಯ. ಇದನ್ನು ಪ್ರತಿಭಟಿಸಲೇಬೇಕು. ವಾಣಿಜ್ಯ ಕ್ಷೇತ್ರದಲ್ಲಿ, ಕೇಂದ್ರ ಸರ್ಕಾರ ಖಾಸಗಿ ಕ್ಷೇತ್ರದಲ್ಲಿ ಸಾವಿರಾರು ಕೋಟಿ ರೂಗಳ ನಷ್ಟಗಳನ್ನು ಸದ್ದಿಲ್ಲದೆ ಮನ್ನಾಮಾಡುತ್ತದೆ. ಆದರೆ ಸಹಕಾರಿ ಕ್ಷೇತ್ರಕ್ಕೆ ಮಾತ್ರ ಸೌಲಭ್ಯಗಳನ್ನು ನೀಡುವಲ್ಲಿ ಮಲತಾಯಿ ಧೋರಣೆಯನ್ನು ಅನುಸರಿಸುತ್ತದೆ. ಸಹಕಾರಿಗಳಿಗೆ ನ್ಯಾಯ ಒದಗಿಸುವ ಈ ಹೋರಾಟ ಮುಂದುವರೆಯಲಿ ಇದಕ್ಕೆ ರಾಜ್ಯದ ಎಲ್ಲ ಸಹಕಾರಿಗಳ ಸಹಕಾರ ಇದೆ ಎಂದು ತಿಳಿಸಿದರು.

ಅಸೋಸಿಯೇಶನ್ ನಿರ್ದೇಶಕ ಶ್ರೀ ಎಸ್.ಎನ್.ವಿಶ್ವನಾಥ್‌ರವರ ಪ್ರಾರ್ಥನೆಯಾದ ನಂತರ ಇನ್ನೂಬ್ಬ ನಿರ್ದೇಶಕ ಶ್ರೀ ಸಾಗರ ಚವಜರವರು ಅತಿಥಿಗಣ್ಯರನ್ನು ಹಾಗೂ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಪ್ರಾರಂಭದಲ್ಲಿ ಪ್ರಾಸ್ತಾವಿಕ ಭಾಷಣಮಾಡಿದ ಅಸೋಸಿಯೇಶನ್ ಪ್ರಧಾನ ಕಾರ್ಯದರ್ಶಿ ಶ್ರೀ ಗುರುನಾಥ ಜ್ಯಾಂತಿಕರ್‌ರವರು ರಾಜ್ಯದಲ್ಲಿ ಕ್ರೆಡಿಟ್ ಸಹಕಾರ ಸಂಸ್ಥೆಗಳ ಸಮಸ್ಯೆಗಳು ಅನೇಕ.ಈ ಸಂಸ್ಥೆಗಳು ಸಮಾಜದ ಹಿಂದುಳಿದ ಯುವಕರ, ಮಹಿಳೆಯರ, ಮಧ್ಯಮವರ್ಗದವರ ಹಾಗೂ ಎಲ್ಲ ವರ್ಗದವರಿಗೆ ಆರ್ಥಿಕ ನೆರವನ್ನು ನೀಡುತ್ತ ಉತ್ತಮ ಸೇವೆಯನ್ನು ನೀಡುತ್ತಿದ್ದಾಗ್ಯೂ ಸಹ ಇವುಗಳ ಅಸ್ತಿತ್ವದ ಬಗ್ಗೆ ಆರ್.ಬಿ.ಐ ಆಗಲಿ ರಾಜ್ಯ ಸರಕಾರವಾಗಲಿ, ಕೇಂದ್ರ ಸರಕಾರವಾಗಲಿ ಹಣಕಾಸಿನ ಸಂಸ್ಥೆಗಳೆಂದು ಮಾನ್ಯತೆ ನಿಡುತ್ತಿಲ್ಲ. ಇದೊಂದು ದುರ್ದೈವ. ಅನೇಕ ಸಮಸ್ಯೆಗಳ ಪರಿಹಾರಕ್ಕಾಗಿ ವೇದಿಕೆಯ ಅಗತ್ಯತೆಯ ಹಿನ್ನೆಲೆಯಲ್ಲಿ ಈ ಅಸೋಸಿಯೇಶನ್ ಅಸ್ತಿತ್ವಕ್ಕೆ ಬಂದಿದೆ. ವಿಶೇಷವಾಗಿ ಥರ್ಡ ಪಾರ್ಟಿ ಚೆಕ್ ಕಲೆಕ್ಷನ್ ಅನುಮತಿ ಬಗ್ಗೆ ಯಾವ ಹಂತದಲ್ಲೂ ಸಕಾರಾತ್ಮಕ ಪ್ರತಿಕ್ರಿಯೆ ಬಾರದಿದ್ದಾಗ ಅಸೋಸಿಯೇಶನ್ ಎಲ್ಲ ಹಂತಗಳಲ್ಲೂ ಹೋರಾಟ ನಡೆಸಿ ಯಶಸ್ವಿಯಾಗಿದೆ. ಈಗ ರೂ 50,000 ಗಳ ವರೆಗೆ ಥರ್ಡ್ ಪಾರ್ಟಿ ಚೆಕ್ ಕಲೆಕ್ಷನ್ ಅನುಮತಿ



ದೊರಕಿದೆ. ಇನ್ನು ಇದರ ಪ್ರಮಾಣ ಹೆಚ್ಚಿಸಬೇಕಿದೆ. ಈ ಬಗ್ಗೆ ಪ್ರಯತ್ನ ನಡೆಯುತ್ತಿದೆ ಎಂದು ತಿಳಿಸುತ್ತ ಈ ಹಂತದಲ್ಲಿ ಕೇಂದ್ರ ಸರಕಾರ ನೇರ ತೆರಿಗೆ ಪದ್ಧತಿಯನ್ನು ಜಾರಿಗೆ ಕೊಡಲು ಆಲೋಚಿಸುತ್ತಿರುವುದು ಸಹಕಾರಿ ಕ್ಷೇತ್ರದ ಮೇಲೆ ಗದಾಪ್ರಹಾರವಾದಂತಾಗಿ ಈ ಕ್ಷೇತ್ರದ ಅಭಿವೃದ್ಧಿಗೆ ಮಾರಕವಾಗುತ್ತದೆ. ಆದ್ದರಿಂದ ಒಂದು ರೀತಿಯ ಸಂಘಟನಾತ್ಮಕ ಹೋರಾಟ ಅಗತ್ಯವಾಗಿದೆ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ **ಅಕ್ಟೋಬರ್ ತಿಂಗಳಿನಲ್ಲಿ ದೇಶದ ಗಮನವನ್ನು ಸೆಳೆಯುವಂತಹ ಪತ್ತಿನ ಸಹಕಾರಿಗಳ 2ನೇ ಬೃಹತ್ ಸಮಾವೇಶವನ್ನು ಬೆಂಗಳೂರಿನಲ್ಲಿ ನಡೆಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.**



ಕ್ರೆಡಿಟ್ ಸೊಸೈಟೀಸ ಅಸೋಸಿಯೇಶನ್ ನಿರ್ದೇಶಕ ಶ್ರೀ ಕೆ. ಶಿವಲಿಂಗಪ್ಪನವರು ಕರ್ನಾಟಕ ಸ್ಟೇಟ್ ಬಾರ್ ಕೌನ್ಸಿಲಗೆ ಸದಸ್ಯರಾಗಿ ಆಯ್ಕೆಯಾಗಿರುವ ಪ್ರಯುಕ್ತ ಅವರನ್ನು ಸನ್ಮಾನಿಸಲಾಯಿತು.

ವಿಧಾನ ಪರಿಷತ ಸದಸ್ಯ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಅರುಣ ಶಹಾಪೂರ, ವಾಸವಿ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷ ಶ್ರೀ ರವಿಶಂಕರ ಕ್ರೆಡಿಟ್ ಸೊಸೈಟೀಸ್ ಅಸೋಸಿಯೇಶನ್ ಅಧ್ಯಕ್ಷ ಶ್ರೀ ರಾವಸಾಹೇಬ್ ಪಾಟೀಲ್ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ರಾಜ್ಯದ ವಿವಿಧ ಕ್ರೆಡಿಟ್ ಸಹಕಾರ ಸಂಘಗಳ 500 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಸಾಗರದ ಚಾರ್ಟರ್ಡ ಅಕೌಂಟೆಂಟ್ ಶ್ರೀ ಬಿ.ವಿ.ರವೀಂದ್ರನಾಥ ಹಾಗೂ ಮೈಸೂರಿನ ಚಾರ್ಟರ್ಡ ಅಕೌಂಟೆಂಟ್ ಶ್ರೀ ಅಚ್ಯುತ ರವರು ಡಿ.ಟಿ.ಸಿ.ಬಗ್ಗೆ ವಿಷಯ ವಿವರಣೆ ನೀಡಿದರು. ಶ್ರೀ ವೈ. ಕುಮಾರರವರು ಕಾರ್ಯಕ್ರಮ ನಿರೂಪಣೆ ಮಾಡಿ ಅತಿಥಿಗಳ ಪರಿಚಯದೊಂದಿಗೆ ಕಾರ್ಯಕ್ರಮ ನಡೆಸಿಕೊಟ್ಟರು.

# ಸ್ವದೇಶಿ ಜಾಗರಣ ಮಂಚ ಆಂಧ್ರ ಪ್ರದೇಶ ಇವರ ನೇತೃತ್ವದಲ್ಲಿ ಭಾರತೀಯ ಅಭಿವೃದ್ಧಿ ಮಾದರಿಗಳು – ರಾಷ್ಟ್ರೀಯ ಕಾರ್ಯಾಗಾರ

**ಹೈದರಾಬಾದ್:** ಸ್ವದೇಶಿ ಜಾಗರಣ ಮಂಚ ಇವರ ನೇತೃತ್ವದಲ್ಲಿ ಭಾರತೀಯ ಅಭಿವೃದ್ಧಿ ಮಾದರಿ ಕುರಿತು ರಾಷ್ಟ್ರೀಯ ಕಾರ್ಯಾಗಾರವು ದಿನಾಂಕ 27/8/20011 ಹಾಗೂ ದಿನಾಂಕ 28/8/2011 ರಂದು ಭಾರತ ಇಂಜಿನೀಯರಿಂಗ ಕಾಲೇಜ ಆವರಣದಲ್ಲಿ ನಡೆಯಿತು. ಭವ್ಯರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಆಗಿಂದಾಗ್ಗೆ ನಮ್ಮ ಅಭಿವೃದ್ಧಿಯ ದಿಕ್ಕು ದೆಶೆಗಳ ಬಗ್ಗೆ ಗಮನ ಹರಿಸಿ ಮುಂದೆ ಸಾಗಬೇಕಾಗುತ್ತದೆ. ನಮ್ಮ ಪ್ರಗತಿಯ ಹೆಜ್ಜೆಯನ್ನು ಧೃಡೀಕರಿಸಿಕೊಳ್ಳಬೇಕಾಗುತ್ತದೆ. ಈ ದಿಸೆಯಲ್ಲಿ ನಮ್ಮ ಇದುವರೆಗಿನ ಸಾಧನೆಯ ಸಿಂಹಾವಲೋಕನ ಮಾಡಿ ವಿವಿದ ವಿಷಯಗಳ ಪ್ರಗತಿಯನ್ನು ಮೆಲಕು ಹಾಕಿ ಮುಂದೆ ಸಾಗುವ ಉದ್ದೇಶದಿಂದ ಈ ರಾಷ್ಟ್ರೀಯ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಸ್ವದೇಶಿ ವಿಚಾರ ಧಾರೆಗಳ ಶ್ರೀ ಕೆ.ಎನ್.ಗೋವಿಂದಾಚಾರ್ಯ ಭಾರತ ಎಜುಕೇಶನ್ ಸಂಸ್ಥೆಗಳ ಅಧ್ಯಕ್ಷ ಶ್ರೀ ವೇಣುಗೋಪಾಲರೆಡ್ಡಿ ಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಅಖಿಲಭಾರತ ವಿಚಾರ ವೇದಿಕೆಯ ಸಂಚಾಲಕ ಡಾ. ಅಶ್ವಿನಿ ಮಹಾಜನ ಹಾಗೂ ರಾಜ್ಯ ಸಂಚಾಲಕ ಶ್ರೀ ರಾಜಾಮಹೇಂದ್ರ ರೆಡ್ಡಿ ಯಿವರ ಉಪಸ್ಥಿತಿಯಲ್ಲಿ "ವಿಕೇಂದ್ರಿಕರಣದಿಂದ ತೃಪ್ತಿಕರ ಸಾದನೆ" ವಿಷಯದ ಚರ್ಚೆಯೊಂದಿಗೆ ಪ್ರಾರಂಭವಾಯಿತು.

ನಂತರ "ಕೃಷಿಕ್ಷೇತ್ರದ ಸವಾಲುಗಳು ಮತ್ತು ತೃಪ್ತಿಕರ ಸಾಧನೆ" ವಿಷಯದ ಬಗ್ಗೆ ಡಾ.ಬಿ.ಗೋಪಾಲರೆಡ್ಡಿಯವರು ಡಾ.ಜಿ.ವಿ.ರಾಮಾಂಜನೆಯಲು ಮಾತನಾಡಿದರು. ಅಧ್ಯಕ್ಷತೆಯನ್ನು ಡಾ. ಎಲ್.ಚಲಪತಿರಾವರವರು ವಹಿಸಿದ್ದರು. ಎರಡನೇಯ ಅದಿವೇಶನದಲ್ಲಿ ಚೆನ್ನೈನ ಶ್ರೀ ಎಮ್.ಆರ್.ವೆಂಕಟೇಶರವರು "ಜಾಗತಿಕ ಆರ್ಥಿಕ ಹಿಂಜರಿತ " ಹಾಗೂ ಶ್ರೀ ಪಾಂಡಿಯಾರಾಜನ ಅವರು "ಭಾರತದಲ್ಲಿ ಮಾನವ ಸಂಪನ್ಮೂಲಗಳು" ವಿಷಯಗಳ ಬಗ್ಗೆ ಮಾತನಾಡಿದರು. ಪ್ರೊ.ಬಿ.ಕೆ. ಕುಮಾರಸ್ವಾಮಿಯವರು "ಲ್ಯಾಂಡ ಅಕ್ವಿಜಿಶನ್ ಕಾಯ್ದೆ ಅದರ ಪರಿಣಾಮ" ಡಾ.ಅಶ್ವಿನಿ ಮಹಾಜನ ರವರು 20 ವರ್ಷಗಳ ಆರ್ಥಿಕ ಸುಧಾರಣೆ ಕ್ರಮಗಳು ಹಾಗೂ ಅವುಗಳ ಪರಿಣಾಮ ವಿಷಯ್ ಬಗ್ಗೆ ಶ್ರೀ ಸುಂದರಮ್ರವರು "ಪ್ರಗತಿಪಥದತ್ತ ಸ್ವದೇಶಿ ಚಳುವಳಿ" ಶ್ರೀ ಕಾಶ್ಮೀರಿಲಾಲ ರವರು "ಸ್ವದೇಶಿ ಕಾರ್ಯಚಟುವಟಿಕೆಗಳು ಒಂದು ಅವಲೋಕನ"ಶ್ರೀ ವಿ. ಸಾಯಿಪ್ರಸಾದರವರು ಎಫಡಿಐ ಇನ್ಟಿಟೆಲ್ ಟ್ರೆಡ್ ವಿಷಯದ ಬಗ್ಗೆ, ಡಾ. ಶ್ರೀನಿವಾಸನ್ ರವರು ಭಾರತೀಯ ವ್ಯವಹಾರಗಳ ಮಾದರಿ ಬಗ್ಗೆ ಶ್ರೀ ವೈ.ವಿ.ಎಸ್.ಟಿ.ಸಾಯಿ ಯವರು ತೆರಿಗೆಗಳ ಬಗ್ಗೆ ಮತ್ತು ಭಾರತೀಯ ಆರ್ಥಿಕ ವ್ಯವಸ್ಥೆ ಮತ್ತು ಭಾರತೀಯ ಸಂಸ್ಕೃತಿಯನ್ನು ಭದ್ರಪಡಿಸುವ ಬಗ್ಗೆ ಚರ್ಚಾಗೋಷ್ಠಿಗಳು ನಡೆದವು. ದಿನಾಂಕ 28/8/2011 ರಂದು ಪ್ರತಿನಿಧಿಗಳಿಂದ ಪ್ರಶ್ನೋತ್ತರ ದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಸಂಯುಕ್ತ ಸಹಕಾರಿಯ ವತಿಯಿಂದ ನಿರ್ದೇಶಕ ಶ್ರೀ ಸಾಗರ ಚವಜರವರು ಮತ್ತು ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲರವರು ಭಾಗವಹಿಸಿದ್ದರು. ಕಾರ್ಯಕ್ರಮ ಉತ್ತಮವಾಗಿತ್ತೆಂದು ಅಭಿಪ್ರಾಯ ಸೂಚಿಸಿದರು.

## ಎಮ್.ಬಿ.ಎ. ವಿದ್ಯಾರ್ಥಿಗಳಿಗೆ - ಪ್ರಶಸ್ತಿ ಪ್ರದಾನ ಕಾರ್ಯಕ್ರಮ :

# ಸಹಕಾರಿ ಕ್ಷೇತ್ರದ ಮೂಲಕ ಸಾರ್ವಜನಿಕರ ಸೇವೆ ಹಾಗೂ ಆರ್ಥಿಕ ಅಭಿವೃದ್ಧಿ ಸಾಧ್ಯ – ಡಾ.ವಿ.ಎಸ್.ಆಚಾರ್ಯ



ಸಂಯುಕ್ತ ಸಹಕಾರಿಯ ಅಂಗಸಂಸ್ಥೆಯಾದ "ಸಹಕಾರ ಅಭಿವೃದ್ಧಿ ಪ್ರತಿಷ್ಠಾನ" ಕರ್ನಾಟಕ ಮೈಸೂರು ವಿಶ್ವ ವಿದ್ಯಾಲಯದ ಮಾನ್ಯತೆ ಪಡೆದು 2007 ರಿಂದ 2010 ರವರೆಗೆ ನಡೆಸಲಾದ ಎಮ್.ಬಿ.ಎ. ಬ್ಯಾಂಕಿಂಗ್ & ಫೈನಾನ್ಸ್ ಅಧ್ಯಯನ ಮಾಡಿದ 37 ವಿದ್ಯಾರ್ಥಿಗಳಿಗಾಗಿ ಪದವಿ ಪ್ರದಾನ ಕಾರ್ಯಕ್ರಮವನ್ನು ರಾಜ್ಯ ಸರಕಾರದ ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಡಾ. ವಿ.ಎಸ್. ಆಚಾರ್ಯರವರು ನೆರವೇರಿಸಿ ಸಹಕಾರಿ ಕ್ಷೇತ್ರದ ಮೂಲಕ ಈ ಪದವಿ ಕೋರ್ಸ ನಡೆಸಿರುವುದು ಉತ್ತಮ ಕೆಲಸ. ಈ ಕೋರ್ಸನ್ನು ಪುನಃ ಪ್ರಾರಂಭಿಸಿ. ಇದಕ್ಕೆ ಬೇಕಾದ ಎಲ್ಲ ರೀತಿಯ ಸಹಕಾರಗಳನ್ನು ಸರಕಾರ ನೀಡಲು ಸಿದ್ಧವಿದೆ ಎಂದು ತಿಳಿಸಿ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಪ್ರಥಮ ಸ್ಥಾನವನ್ನು ಶ್ರೀ ಮಂಜುನಾಥ, ದ್ವಿತಿಯ ಸ್ಥಾನವನ್ನು ಪಡೆದ ಕು. ಸಾವಿತ್ರಿ ಹಾಗೂ ತೃತಿಯ ಸ್ಥಾನ ಪಡೆದಿರುವ ಶ್ರೀ ಮನೋಜ್ ಕುಮಾರರವರುಗಳನ್ನು ಅಭಿನಂದಿಸಲಾಯಿತು.

ಬೆಂಗಳೂರು ನಗರದ ಟೌನಹಾಲ್‌ನಲ್ಲಿ ಏರ್ಪಡಿಸಿದ್ದ ಈ ಸಮಾರಂಭದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ವಹಿಸಿದ್ದರು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ ಸದಸ್ಯರಾದ ಕ್ಯಾಪ್ಟನ್ ಶ್ರೀ ಗಣೇಶ ಕಾರ್ಣಿಕ, ಮೈಸೂರು ವಿಶ್ವ ವಿದ್ಯಾಲಯದ ಕಾಮರ್ಸ್ ವಿಭಾಗದ ಅಧ್ಯಾಪಕ ಹಾಗೂ ಡೀನ್ ಪ್ರೊ. ಬಿ. ಶಿವರಾಜ, ವಿಧಾನ ಪರಿಷತ ಸದಸ್ಯರಾದ ಶ್ರೀ ಮನೋಹರ ಮಸ್ಕಿ, ಶಾಸಕರಾದ ಶ್ರೀ ಪ್ರತಾಪಗೌಡ ಪಾಟೀಲ್, ಸಂಯುಕ್ತ ಸಹಕಾರಿಯ ನಿಕಟ ಪೂರ್ವ ಅಧ್ಯಕ್ಷ ಶ್ರೀ ವಿಶ್ವನಾಥ ಚ. ಹಿರೇಮಠ್ ಹಾಗೂ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು, ಅನೇಕ ಸಹಕಾರಿ ಗಣ್ಯರು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಾರ್ಥನೆಯನ್ನು ಕು. ಸಹನಾ ನೆರವೇರಿಸಿದರು. ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರರವರು ಸ್ವಾಗತ ಮಾಡಿದರು. ವಿಧಾನ ಪರಿಷತ ಸದಸ್ಯ ಹಾಗೂ ಸಂಯುಕ್ತ ಸಹಕಾರಿಯ ಸ್ಥಾಪಕ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ಪ್ರಾಸ್ತಾವಿಕ ಭಾಷಣ ಮಾಡಿ ಸಹಕಾರ ಕ್ಷೇತ್ರದಲ್ಲಿ ಯುವ ಜನಾಂಗಕ್ಕೆ ನೀಡ ಬೇಕಾದ ಉನ್ನತ ಮಟ್ಟದ ಶಿಕ್ಷಣ ಕೊಡುವ ಉದ್ದೇಶದಿಂದ, ಜೊತೆಗೆ ಜಾಗತಿಕ ಪೈಪೋಟಿಯಲ್ಲಿ ಪ್ರಚಲಿತ ವಿಷಯಗಳ ಶಿಕ್ಷಣ ಒದಗಿಸುವ ವ್ಯವಸ್ಥೆ ಸಹಕಾರ ಕ್ಷೇತ್ರದ ಅವಶ್ಯಕತೆಯಿಂದಾಗಿ, ಸ್ಥಾಪ – ಕೆ ಸ್ಥಾಪಿಸಿ ಅದರ ಮೂಲಕ ಮೈಸೂರು ವಿಶ್ವ ವಿದ್ಯಾಲಯದ ಜೊತೆಗೆ ಒಡಂಬಡಿಕೆ ಮಾಡಿಕೊಂಡು ಪ್ರಪ್ರಥಮವಾಗಿ ಎಮ್.ಬಿ.ಎ. ಇನ್ ಬ್ಯಾಂಕಿಂಗ್ ಮತ್ತು ಫೈನಾನ್ಸ್ ನಂತಹ ಉತ್ತಮ ವಿಷಯದ ಆಯ್ಕೆ ಮಾಡಿ ಕೋರ್ಸ ಪ್ರಾರಂಭಿಸಲಾಯಿತು. ಕೋರ್ಸ ನಡೆಸುವ ಸಂದರ್ಭದಲ್ಲಿ ಅನೇಕ ಸಮಸ್ಯೆಗಳು ಎದುರಾಗುವುದು ಸಹಜ. ಅವೆಲ್ಲವುಗಳನ್ನು ಸಮರ್ಥವಾಗಿ ಎದುರಿಸಿ ಸಹಕಾರ ಕ್ಷೇತ್ರದಲ್ಲಿ ಇಂತಹದ್ದೊಂದು ಸಾಧನೆ ಮಾಡಿದಕೀರ್ತಿ ಸಂಯುಕ್ತ ಸಹಕಾರಿಗೆ ದೊರಕಿದೆ ಇದೊಂದು ಹೆಮ್ಮೆಯ ವಿಷಯ ಸಹಕರಿಸಿದ ಎಲ್ಲ ಆಡಳಿತ ಮಂಡಳಿ ಸದಸ್ಯರಿಗೆ ಕೃತಜ್ಞತೆ ತಿಳಿಸಿದರು.

> **ಪುನಃ ಎಂಬಿಎ ಕೋರ್ಸ್ ಪ್ರಾರಂಭಿಸಲು ಪ್ರೊ. ಬಿ. ಶಿವರಾಜ ಸಲಹೆ**
>
> ಮೈಸೂರು ವಿಶ್ವ ವಿದ್ಯಾಲಯದ ಕಾಮರ್ಸ್ ವಿಭಾಗದ ಡೀನ್ ಹಾಗೂ ಪ್ರೊ.ಬಿ. ಶಿವರಾಜರವರು ಮಾತನಾಡಿ ಇದೊಂದು ಉತ್ತಮ ಬೇಡಿಕೆಯಿರುವ ಕೋರ್ಸ್. ಮೈಸೂರು ವಿಶ್ವ ವಿದ್ಯಾಲಯದಲ್ಲಿ ಇತ್ತೀಚಿನ ದಿನಗಳಲ್ಲಿ ಇನ್ನೂ ಅನೇಕ ವಿಧವಾದ ಕೋರ್ಸ್‌ಗಳನ್ನು ಪ್ರಾರಂಭಿಸಲು ಅವಕಾಶವಿದೆ. ವಿದ್ಯಾರ್ಥಿಗಳಿಗೆ ಹಾಗೂ ಸಂಸ್ಥೆಗಳಿಗೆ ನೆರವಾಗುವ ದೃಷ್ಟಿಯಿಂದ ನೀತಿ ನಿಯಮಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಈ ಕೋರ್ಸ್‌ನ್ನು ಮತ್ತೆ ಪ್ರಾರಂಭಿಸಿದಲ್ಲಿ ಮೈಸೂರು ವಿಶ್ವವಿದ್ಯಾಲಯದವತಿಯಿಂದ ಎಲ್ಲ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ನಿಕಟ ಪೂರ್ವ ಅಧ್ಯಕ್ಷ ಶ್ರೀ ವಿಶ್ವನಾಥ ಹಿರೇಮಠರವರು ಮಾತನಾಡಿ ಸಹಕಾರ ಕ್ಷೇತ್ರದದಲ್ಲಿ ಕೆಲಸ ಮಾಡುವಾಗ ದೂರ ದೃಷ್ಟಿಯಿಟ್ಟುಕೊಂಡು ಕಾರ್ಯನಿರ್ವಹಿಸಬೇಕಾಗುತ್ತದೆ. ಶ್ರೀಯುತ ಮನೋಹರ ಮಸ್ಕಿಯವರು ಕನಸು ಕಂಡದ್ದನ್ನು ಸಾಕಾರಗೊಳಿಸುವ ಕಾರ್ಯದಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸಿದವು. ಎಲ್ಲ ನಿರ್ದೇಶಕರು ಹಾಗೂ ವಿದ್ಯಾರ್ಥಿಗಳ ಸಹಕಾರದಿಂದ ಅವುಗಳನ್ನು ಪರಿಹರಿಸಲಾಯಿತು ಎಂದು ತಿಳಿಸಿದರು.




ಗಣ್ಯರೊಂದಿಗೆ ಹೆಚ್ಚು ಅಂಕ ಗಳಿಸಿದ ಎಂಬಿಎ ವಿದ್ಯಾರ್ಥಿಗಳು

# ಸಂಯುಕ್ತ ಸಹಕಾರಿಯ ಸದಸ್ಯರ ಪ್ರೌಢಿಮೆಯ ಪ್ರದ




ಆಡಳಿತ ಮಂಡಳಿ ಸದಸ್ಯರು



ಸಾಮಾನ್ಯ ಸಭೆಯಲ್ಲಿ ಪ್ರತಿನಿಧಿಗಳು



ಸಾಮಾನ್ಯ ಸಭೆಯಲ್ಲಿ ಪ್ರತಿನಿಧಿಗಳು



ಸಾಮಾನ್ಯ ಸಭೆಯಲ್ಲಿ ಪ್ರಶ್ನೋತ್ತರ




ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 10 ನೇಯ ಸಾಮಾನ್ಯ ಸಭೆ ಬೆ
ಶ್ರೀಯುತ ಎಸ್.ಆರ್.ಸತೀಶಚಂದ್ರರವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯಕ್ರಮವನ್ನು ಕುಮಾ
ಉಪಾಧ್ಯಕ್ಷರಾದ ಶ್ರೀಯುತ ಗುರುನಾಥ ಜ್ಯಾಂತಿಕರರವರು ಪ್ರತಿನಿಧಿಗಳನ್ನು ಸ್ವಾಗತಿಸಿ, ನೂತನ

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಪ್ರಾಸ್ತಾವಿಕ ಭಾಷಣ ಮಾಡುತ್ತಾ, ರಾಜ್ಯದ
ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ 1289 ಹೊಸದಾಗಿ ಪ್ರಾರಂಭವಾಗಿರುವುದು
ಹೆಚ್ಚು ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಈ ಕ್ಷೇತ್ರದಲ್ಲಿ 274 ಕೊಟಿ ರೂ. ಬಂಡವಾಳ,
ನಿಧಿಗಳು, 4200 ಕೋಟಿ ರೂ. ಗಳ ದುಡಿಯುವ ಬಂಡವಾಳವಿದ್ದು 16,500 ಕ್ಕೂ ಹೆಚ್ಚು
ಹೆಚ್ಚು ಜನರಿಗೆ ಅವಕಾಶವಾಗಿದೆ. ಸೌಹಾರ್ದ ಸಹಕಾರಿಗಳ ಸಂಖ್ಯೆ ಈ ವರ್ಷದ ಅಂತ್ಯಕ್ಕೆ 20
ವ್ಯವಹಾರ ನಡೆಯುತ್ತಿದೆ. ಕೆಲವೇ ದಿನಗಳಲ್ಲಿ ಈ ಸಂಖ್ಯೆ 400ರನ್ನು ತಲುಪುತ್ತಿದೆ. ಈ ಹಿನ್ನೆ
ಸಹಕಾರಿಯ ಪ್ರಸಕ್ತ ಸಾಲಿನಲ್ಲಿ ಜರುಗಿಸಿದ ಕಾರ್ಯಕ್ರಮಗಳು ಅವುಗಳ ಗುಣಮಟ್ಟ ಹಾಗೂ
ಬಗ್ಗೆ ವಿಶೇಷ ಗಮನವನ್ನು ಹರಿಸಬೇಕು. ಬಡ್ಡಿಯೇತರ ಆದಾಯಗಳ ಬಗ್ಗೆ ಹೆಚ್ಚಿನ ಆದ್ಯತೆ ನಿ
ಮಾರ್ಗಸೂಚಿಗಳ ಪರಿವಿಧಿಗಳ ಒಳಗೆ ಕಾರ್ಯನಿರ್ವಹಿಸಬೇಕು ಸ್ವಾಯತ್ತತೆಯನ್ನು ಸ್ವೇಚ್ಛಾ
ಅನಿವಾರ್ಯವಾಗುತ್ತದೆ. ಹೀಗಾಗಿ ಸಹಕಾರಿ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರುತ್ತದೆ ಹಾಗಾಗದಂತೆ ಎ

ಸೌಹಾರ್ದ ಸಹಕಾರಿ ಕ್ಷೇತ್ರದ ಮುಂದೆ ಡಿ.ಟಿ.ಸಿ (ನೇರ ತೆರಿಗೆ ಸಂಹಿತೆ) ಹಾಗೂ ಜಾಗ
ಹಣಕಾಸು ನಿರ್ವಹಣೆಯ ಮಾನ್ಯತೆ ದೊರಕಿಸುವಂತಹ ಅನೇಕ ಸವಾಲುಗಳಿವೆ. ಅವುಗಳನ್ನು
ತಿಳಿಸಿದರು.

# 10ನೇ ಸಾಮಾನ್ಯ ಸಭೆ
# ರ್ಶನ ಉತ್ತಮ ಚರ್ಚೆಗಳು





ಸಹಕಾರಿ ಅಭಿವೃದ್ಧಿ ಪ್ರತಿಷ್ಠಾನ ಸಭೆಯಲ್ಲಿ ಗಣ್ಯರೊಂದಿಗೆ ವಿದ್ಯಾರ್ಥಿಗಳು



ಸಹಕಾರಿ ಅಭಿವೃದ್ಧಿ ಪ್ರತಿಷ್ಠಾನ ಸಭೆಯಲ್ಲಿ ಪ್ರೊ. ಬಿ. ಶಿವರಾಜು ಅವರಿಗೆ ಸನ್ಮಾನ



ವಿದ್ಯಾರ್ಥಿಗಳ ಪಾಲಕರು, ಸಹಕಾರಿ ಗಣ್ಯರು



ಸಮಾರಂಭದಲ್ಲಿ ವಿದ್ಯಾರ್ಥಿಗಳು ಹಾಗೂ ಗಣ್ಯರು

ಂಗಳೂರು ನಗರದ ಜೆ.ಸಿ.ರಸ್ತೆಯಲ್ಲಿನ ಟೌನ್‌ಹಾಲ್‌ನಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ
ರಿ ಎಮ್.ಎನ್. ಮಾನಸರವರ ಪ್ರಾರ್ಥನೆಯಿಂದ ಪ್ರಾರಂಭಿಸಲಾಯಿತು. ಸಂಯುಕ್ತ ಸಹಕಾರಿಯ
ನಿರ್ದೇಶಕರನ್ನು ಸಭೆಗೆ ಪರಿಚಯಿಸಿದರು.

ಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾದಾಗಿನಿಂದ ಇದುವರೆಗೆ 1654 ಸೌಹಾರ್ದ
365 ಹಳೆಯ ಕಾಯ್ದೆಯಿಂದ ಪರಿವರ್ತನೆಯಾಗಿರುವುದಾಗಿರುತ್ತದೆ. ಇದುವರೆಗೆ 1760 ಕ್ಕೂ
3750 ಕೊಟಿ ರೂ. ಠೇವಣಿ, 3612 ಕೊಟಿ ರೂ. ಸಾಲಗಳು 600 ಕೋಟಿ ರೂ ಕಾಯ್ದಿಟ್ಟ
ಜನ ಉದ್ಯೋಗಸ್ಥರಾಗಲು ಅವಕಾಶವಾಗಿದೆ. ಇದಲ್ಲದೆ ಪೂರಕ ಉದ್ಯೋಗದಲ್ಲಿ 12500 ಕ್ಕೂ
00 ಕ್ಕೆ ತಲುಪುತ್ತದೆ. ಸೌಹಾರ್ದ ಸಹಕಾರಿಗಳ ಮೂಲಕ 390 ಕೇಂದ್ರಗಳಲ್ಲಿ ಇ–ಸ್ಟಾಂಪಿಂಗ
ಲೆಯಲ್ಲಿ ಸದಸ್ಯ ಸಹಕಾರಿಗಳ ಜವಾಬ್ದಾರಿ ಹೆಚ್ಚಿದೆ ಎಂದು ತಿಳಿಸಿದರು. ನಂತರದಲ್ಲಿ ಸಂಯುಕ್ತ
ಸಹಕಾರಿಗಳ ಪಾಲ್ಗೊಳ್ಳುವಿಕೆಯ ಬಗ್ಗೆ ತಿಳಿಸಿದರು. ಸಹಕಾರಿಗಳು ತಮ್ಮ ಹಣದ ಹೂಡಿಕೆಯ
ೀಡಬೇಕು ಎಂದು ತಿಳಿಸಿ ಕಾನೂನು, ನಿಯಮ ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿಯ
ಚಾರವನ್ನಾಗಿಸುವ ಪ್ರಯತ್ನ ಸಲ್ಲದು ಹಾಗಾದಾಗ ಕಾನೂನು ರೀತ್ಯಾ ಕ್ರಮಜರುಗಿಸುವುದು
ಚ್ಚರವಹಿಸುವುದು ಸಹಕಾರಿಗಳ ಕರ್ತವ್ಯವಾಗುತ್ತದೆ ಎಂದು ತಿಳಿದರು.

ತಿಕ ಆರ್ಥಿಕ ಹಿಂಜರಿತದಂತಹ ಹಾಗೂ ಆರ್.ಬಿ.ಐ ನಿಂದ ಪತ್ತಿನ ಸಹಕಾರಿ ಸಂಸ್ಥೆಗಳಿಗೆ
ಎದುರಿಸಿ ಕಾರ್ಯನಿರ್ವಹಿಸುವ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಳ್ಳುವ ಅಗತ್ಯ ಇದೆ ಎಂದು